Reg. No. M. 1550

14—2—1936

IF NOT

delivered

please return to

"KODAGU"
OFFICE,
MERCARA.

KODAGU

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸು,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಕಸ್ತೀನ ಭೂಷಚರ್ಯಯಾ ವಿದ್ಯಾ ಧೀನಿ ಪ್ರಯುಕ್ತಾನಾ॥ ಐಕ್ಯಮುಕ್ತೇನ ಧರ್ಮಾಣಾಂ ಸುನಿ ರಾ ರಾಜ್ಯ ಸೂಪದಾ

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಐ. ಬೆಳ್ಯಪ್ಪು.

ಸಂಪುಟ ೧೫] ಮಡಿಕೇರಿ, ಸನ್ ೧೯೩೬ನೇ ಇಸವಿ ಫೆಬ್ರವರಿ ತಾರೀಕು ೧೪ ನೇ ಶುಕ್ರವಾರ. [ಸಂಚಿಕೆ ೩೪

Telephon ;
3145

By Appointment
To H. E. The Governor of Madras.

Telegrams:
'PRECIOUS.'

Brocch

Ring.

Necklace.

Ring.

V. SUBRAMANIA IYER.

Jeweller, & Diamond Merchant,

52—12 2 & 3 Kuppumuthu Street Tiruvateswaranpet POST BOX 423 TRIPLICANE. P. O., MADRAS.

Catalogue & special designs with quotations (free) on enqu ry

1906 ರಲ್ಲಿ ಸ್ಥಾಪಿತವಾದದ್ದು.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಉಡುಪಿ—ಲಿಮಿಟೆಡ್.

(ಬ್ರಿಟಿಷ್ ಇಂಡಿಯದಲ್ಲಿ ರಜಿಸ್ಟರ್ ಆದದ್ದು.)

ಹೆಡ್ ಆಫೀಸು—ಉಡುಪಿ.

ಶಾಖೆಗಳು.

(1) ಉಡುಪಿ
(2) ಕುಂದಾಪುರ
(3) ಮಂಗಳೂರು—ರಥಬೀದಿ
(4) ಮಂಗಳೂರು—ಬಂದರ್
(5) ಮದರಾಸು
(6) ಶಿವಮೊಗ್ಗಾ
(7) ಮಡಿಕೇರಿ
(8) ವೀರರಾಜೇಂದ್ರಪೇಟೆ

ಬೀಂಕೆರರು.

(1) ಬೊಂಬಾಯಿ
(2) ಕಲ್ಕತ್ತಾ
(3) ಕರಾಚಿ
(4) ಕೊಚ್ಚಿನ್
(5) ಮೈಸೂರು
(6) ಬೆಂಗಳೂರು ಇತ್ಯಾದಿ ಸ್ಥಳಗಳಲ್ಲಿ.

ನಿಮ್ಮ ಸೇವೆಯೇ ನಮ್ಮ ಧ್ಯೇಯ.

ತಾ. 15—1—1936 ರಿಂದ ಚಿನ್ನಾಭರಣಗಳ ಮೇಲಣ ಸಾಲಗಳ ಬಡ್ಡಿಯ ದರವನ್ನು ಅತೀ ಕಡಿಮೆ ದರಕ್ಕೆ ಇಳಿಸಲಾಗಿದೆ.

ನಿರಖು ಠೇವಣಾತಿಗಳನ್ನು ಶೇಕಡ 5ರ ವರೆಗಿನ ಬಡ್ಡಿಯಲ್ಲಿ ಈಗ ಸ್ವೀಕರಿಸಲಾಗುತ್ತದೆ.

ಚಾಲ್ತಿ, ಸೇವಿಂಗ್ಸ್‌ಬ್ಯಾಂಕ್, ಕ್ಯುಮಿಲೇಟಿವ್ ಠೇವಣಾತಿಗಳನ್ನು ಅತೀ ಲಾಭದಾಯಕವಾದ ಬಡ್ಡಿಯಲ್ಲಿ ತೆರೆಯೋಣಾಗುತ್ತವೆ.

ಲಿಲ್ಲದೆ

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿ ನಮ್ಮ ಯಾವುದೇ ಆಫೀಸಿನಿಂದ ಪಡೆಯಬಹುದು.

52—13

ಜನರಲ್

ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.

(ಸ್ಥಾಪಿತವಾದದ್ದು 1907 ರಲ್ಲಿ)

ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ ಕೊಡುತ್ತದೆ.

ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು ವಂಶವಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾರ್ಗವನ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್. ದಿ ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—

ಎ. ಎನ್ ಎಸ್ ಅಯ್ಯಂಗಾರ್.
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್, ಚಾಮರಾಜಪೇಟೆ, 3ನೇ ರೋಡು

52—36 ಬೆಂಗಳೂರು

ಪಂಡಿತ ತಾರಾನಾಥರ ಡೈರಿ.

(ಸಂಗ್ರಹಕಾರರು—ಪತ್ರಿಕೋದ್ಯಮ ಶಾಲೆಯವರು.



೧.

ನಮ್ಮ ಸಂಸ್ಕೃತಿ ಎಂದರೇನು? ಪಾಶ್ಚಿಮಾತ್ಯರ ಶಾಸನ ಪದ್ಧತಿಗಳಲ್ಲಿರುವ ಸಂಸ್ಕೃತಿ ಭಾಗವು ಯಾವದು? ಅವರಲ್ಲಿ ಧನ ಮತ್ತು ಸಂಖ್ಯಾಬಲವೇ ಸಂಪೂರ್ಣ ವಿಜಯದ ಹಾದಿ. ನಮ್ಮಲ್ಲಿ ಆತ್ಮಬಲವೇ ಪ್ರಧಾನವಸ್ತು. ಆ ಪಾಶ್ಚಿಮಾತ್ಯ ಬಲಕ್ಕೆ ಸಮರಾಂಗಣವು ಅವಶ್ಯಕವಾದ ಭೂಮಿ, ಈ ಪೌರ್ವಾತ್ಯ ಬಲಕ್ಕೆ ನಿಷ್ಕಲಂಕ ಹೃದಯವೇ ರಣರಂಗ ಅಲ್ಲಿ ವೈರಿ ಸಂಹಾರವು ವಿಜಯದ ಕುರುಹು, ಇಲ್ಲಿ ವೈರಿಯ ಹೃದಯ ಪರಿವರ್ತನವು ವಿಜಯದ ಲಕ್ಷಣ. ಆಯುಧವು ಅದಕ್ಕೆ ಬೇಕಾದ ಸನ್ನಾಹ, ಅಂತಃಕರಣ ಶುದ್ಧಿಯೇ ಇಲ್ಲಿ ಮುಖ್ಯವಾದ ಉಪಕರಣ. ಕ್ರೋಧವು ಅಲ್ಲಿ ಬೇಕಾದ ಸ್ಫೂರ್ತಿ, ಪ್ರೇಮವು ಇಲ್ಲಿ ಬೇಕಾದ ಸಿದ್ಧಿ. ಅಲ್ಲಿ ರೋಷಾವೇಶವು ಭಯವನ್ನು ಮರೆಸುತ್ತದೆ. ಇಲ್ಲಿ ಜ್ಞಾನ ಶಾಂತಿಯು ಅದನ್ನು ಅಳಿಸುತ್ತದೆ. **ನಮ್ಮ ಸಂಸ್ಕೃತಿಯು ಪ್ರತಿಯೊಂದು ಅಂತ್ಯವೂಂಗವೂ ನಮ್ಮ ಸ್ವರಾಜ್ಯದ ತಿರುಳಾಗಿರಬೇಕಾದರೆ ಅಂತಹ ಸ್ವರಾಜ್ಯಸಾಧನೆಗೂ ಅದೇ ಮೊದಲಾಗಿರಬೇಕು ಎಂದು ಮಹಾತ್ಮ ಮತ.**

ಭಾರತೀಯ ಸ್ವಾತಂತ್ರ್ಯ ಸಮರಕ್ಕೆ ಎಲ್ಲರೂ ಕಟಿಬದ್ಧರಾಗಿದ್ದಾರೆ. ಒಂದೊಂದು ಗುಂಪು ಒಂದೊಂದು ರೀತಿಯಲ್ಲಿ ಕಾದಾಡುತ್ತಿದೆ. ಯಥಾರ್ಥ ಸಮರಕ್ಕೆ ತಕ್ಕ ಫಲವೂ ಸಿಗಬಹುದು. ಸ್ವರಾಜ್ಯವೂ ಸಿಗಬಹುದು. ಆದರೆ ಆಂಗ್ಲೇಯರು ಕೊಡುವ ಸ್ವರಾಜ್ಯಕ್ಕೆ ಆಂಗ್ಲೇಯ ಸಂಸ್ಕೃತಿಯೇ ಅಲ್ಲದ ಇನ್ಯಾವದೂ ಅದಕ್ಕಿಂತ ಮೇಲಾದದ್ದು ಪ್ರಧಾನವಾಗಿರಲಾರದು. ಅಹಮಹಮಿಕೆಯ ವ್ಯರ್ಥಸ್ಪರ್ಧೆ, ಅತಿಶ್ರೇಷೆಯುದ್ಧಗಳ ಮದಿಂದಿನಿಂದ ತಾನೇ ಹೊಂಬೀಳದ ಬಿಲ್ಲಯ ಮೂದರಿಯಿಂದ ನಮ್ಮ ದೇಶಕ್ಕೇನು ಉದ್ಧಾರವಾಯಿತು? ಹೆಸರು ಹೇಗೋ ಇರಲಿ ಯಾವುದೇ ಇರಲಿ, ಕೇವಲ ಪಶ್ಚಿಮ ರಾಜ್ಯಗಳ ಪ್ರತಿಬಿಂಬವಾದ ಸ್ವರಾಜ್ಯವು ಯಾರ ಕಡೆಯಿಂದಲೇ ಬರಲಿ—ಭಾರತೀಯ ಸಂಸ್ಕೃತಿ ಪ್ರಧಾನವಾದ ನಿರ್ಭಯ ಆತ್ಮಶಕ್ತಿ ಪ್ರದರ್ಶನವಾದ ಅಜೇಯ್ಯ ಪ್ರೇಮಸಮರ ಪ್ರೀಯವಾದ ದಿಟ್ಟಲೋದ್ಧಾರಕವಾದ ನಿಜ ಸ್ವರಾಜ್ಯದ ಬೀಜವು ಮಾತ್ರ ಮಹಾತ್ಮ ಗಾಂಧಿಯವರ ಕರಕಮಲದಿಂದಲೇ ಅಂಕುರಿಸತಕ್ಕದಲ್ಲದಿದ.

ಹೀಗಿದ ಆತ್ಮಶಕ್ತಿಯ ಹಿರಿಮೆ. ಒಬ್ಬ ಕವಿಯು ಎಂದಾತ:—

'ಬೈರೇ ಹೈರಿ ತೀರೇ ದೆರ ಪೆ ತೊ ಕಂಛ' ಕರಕೆ ಉಠೆಂಗೆ
ಕಂಕರ್ ಉಠೇಂಗೇ, ಯಾತೋ ಮರ್‌ಕೇ ಉಂಠೇಂಗೆ'

(ನಿನ್ನ ದ್ವಾರದಲ್ಲಿ ಕೂತ ಮೇಲೆ ಏನನ್ನಾದರೂ ಮಾಡಿಯೇ ಏಳುವದಿನ್ನು. ಮಾಡಿಯೇ ಏಳುತ್ತೇನೆ. ಇಲ್ಲವಾದರೆ ಸತ್ತೇ ಏಳುವದು ನಾನು.)

ಇದೀಗ ಆತ್ಮವೈಖರಿ! ಹಠಯೋಗಿಯ ವಾಗ್ಧುರಿ!!

೨.

ವಿವಾಹವು ಧರ್ಮ, ಅರ್ಥ, ಕಾಮ, ಮೋಕ್ಷಗಳಿಗೆಂಬುದಾಗಿ ಆರ್ಯಸಂತತಿಯ ಮತ. ಈ ನಾಲ್ಕಕ್ಕೂ ಸಂಬಂಧಪಟ್ಟ ಶಾಸ್ತ್ರಗಳು ಸಹ ಪೂರ್ವಜರಿಂದ ಮಾಡಲ್ಪಟ್ಟಿವೆ. ಬಂಬರುತ್ತಾ ಈ ನಾಲ್ಕರ ಶಾಸ್ತ್ರ, ವಿಚಾರಗಳಿಗೂ ಭಾರತೀಯರು ಉದಾಸೀನರಾಗಿ ಇವುಗಳ ವೇಷ ಮಾತ್ರಗಳಿಗೆ ಗೌರವವನ್ನು ಕೂಡಿಟ್ಟುಕೊಂಡಿಗಿದರು. ಬಾಯಿಯಿಂದ ಆಹಾರ, ನಿದ್ರೆ, ಭಯ, ವೈಷ್ಣವಗಳ ವಿಷಯಗಳಲ್ಲಿ ಇತರ ಪಶುಪಕ್ಷಿಗಳಿಗಿಂತಲೂ ತಾವು ಅಧಿಕರೆಂದು ಹೆಮ್ಮೆಯನ್ನಿಟ್ಟುಕೊಂಡರೂ ಕಾರ್ಯತಃ ಈ ಎಲ್ಲಾ ಜೀವಿಗಳು ಅವುಗಳಿಗಿಂತ ಹೀನರಾಗುತ್ತ ಬಂದವು. ಅವುಗಳಿಗಿರುವ ನೈಸರ್ಗಿಕ ಕಟ್ಟುನಿಟ್ಟುಗಳೇನೂ ಹೋಗಿಬಿಟ್ಟವು. ಆದರೆ ಅವಕ್ಕೆ ಬದಲಾಗಿ ಜೀವಿತವನ್ನು ಸುಸೂತ್ರವಾಗಿ ನಡೆಯಿಸುವದಕ್ಕೋಸ್ಕರ ಬೇಕಾದ ವಿಜ್ಞಾನ ಪೂರ್ವಕ ನಿಯಮಗಳೂ ಇಲ್ಲದೇ ಹೋದವು. ಫಲ ಇಂದ್ರಿಯೋತ್ಪತ್ತಿಗಳಿಗೆ ಕನಿಷ್ಟ ಯೋನಿಗಳ ನೈಸರ್ಗಿಕ ಬಂಧನವು ಇಲ್ಲದಂತಾಯಿತು. ವಿಶಿಷ್ಟ ಮಾನವ್ಯಕ್ಕೆ ತಕ್ಕ ಶಾಸ್ತ್ರ ನಿಷ್ಠೆಗಳೂ ಇಲ್ಲದಂತಾದವು. (The result is the Phenomena of senses lost the natural restraint over them found in the lower Kingdom of nature and have not yet developed the Scientific ones incombent on man) ನಿಸರ್ಗದ ಉತ್ಪಾದ ವ್ಯಾಪಾರಗಳು ಬರೆಯ ವ್ಯಾಮೋಹ ಉದ್ರೇಕಗಳ ತುಫಾನಿನಲ್ಲಿ ಚುಕ್ಕಾಣಿಯಿಲ್ಲದ ಹಡಗದಂತೆ ಚಲಿಸತೊಡಗಿದವು. ಅಜ್ಞಾನವು ನಿಸರ್ಗಕ್ಕೆ ಲಜ್ಜೆ ಮುಸುಕನ್ನು ಹಾಕಿಬಿಟ್ಟಿತು. ಸಹಜ ಕಾಮ ವೃತ್ತಿಯು ಗಾಂಭೀರ್ಯದ ಗುಹೆಯನ್ನು ಹೊಕ್ಕು ಬೆಳಕು ಕಾಣದೆ, ದಿಕ್ಕು ತೋಚದೆ ಭ್ರಮಿಸುತ್ತಾ ಇದ್ದರೂ ತನ್ನ ವ್ಯಾಪಾರವನ್ನು ಮಾತ್ರ ನಿಲ್ಲಿಸದೇ ರಮಿಸುವದರಿಂದ ಜನಾಂಗವನ್ನು ಯಮದೂತರ ಕೊಳ್ಳೆಯನ್ನಾಗಿ ಮಾಡುತ್ತದೆ ಇಂತಹ ಮುಸುಕನ್ನು ಹರಿಯುವುದಕ್ಕಾಗಿ, ಅಜ್ಞಾನದ ಗವಿಯಲ್ಲಿ ಕಂಣನ್ನು ತೆರೆಯುವದಕ್ಕಾಗಿ, ಸಂತಾನ ವಿಜ್ಞಾನವು ಉತ್ತಮವಾದ ದೀವಿಟಿಗೆಯೇ ಸರಿ. ವೇದ, ಶಾಸ್ತ್ರ, ಪುರಾಣ ಮತ್ತು ಅನೇಕ ಪೌರಾತ್ಯ ಪಾಶ್ಚಿಮಾತ್ಯ ಗ್ರಂಥಗಳ ಆಧಾರದಿಂದ ಉತ್ತಮ ಸಂತಾನವನ್ನು ಹುಟ್ಟಿಸಿ ಬೆಳೆಯಿಸುವ ಉಪಾಯವನ್ನು ಶಾಸ್ತ್ರ ರೀತಿಯಾಗಿ ತೋರಿಸುವುದೇ ಸದ್ಯದ ವಿಜ್ಞಾನಿಗಳ ಕರ್ತವ್ಯ.

ಹಿಂದೆ ಕೋಕಪಂಡಿತನು ಈ ವಿಷಯವನ್ನೇ ತನ್ನ ಕೋಕ ಶಾಸ್ತ್ರದಲ್ಲಿ ಚರ್ಚಿಸುವಾಗ,

ಪಿಂಗಳಬಿನ ಛುದರಜೇ, ತಾಬಿನ ಜ್ಞಾನ ||
'ಕೋಕಬಿನ ರತಿರತೇ, ಯಃ ಸಬಪಶುಸಮೊನ್' ||

ಛುದಃ ಶಾಸ್ತ್ರವನ್ನರಿಯದೆ ಕಾವ್ಯವನ್ನು ಬರೆಯುವವನೂ, ಹೃದಯದಲ್ಲಿ ಸ್ಫೂರ್ತಿಯಿಲ್ಲದೆ ಜ್ಞಾನ ಹೇಳುವವನೂ, ಕೋಕಶಾಸ್ತ್ರವನ್ನು (ಸಂತಾನ ವಿಜ್ಞಾನವನ್ನು) ಅರಿಯದೆ ಸಂಸಾರ ಮಾಡುವವನೂ—ಇವರೆಲ್ಲರೂ ಪಶುವಿಗೆ ಸಮಾನರೇ ಎಂದು ಬರೆದಿದ್ದಾನೆ.

ಲಕ್ಕೋವಿಗೆ ಸ್ವಯಂ ಸೇವಕರ ಅಗತ್ಯವಿಲ್ಲ.

(ಡಾ. ಯನ್. ಯಸ್. ಹರ್ಡೀಕರ್‌ರವರಿಂದ.)

ಸ್ವಯಂ ಸೇವಕರಾಗಿ ಅನೇಕ ಸಲ ಕಾರ್ಯನಿರ್ವಹಿಸಿದ ನನ್ನ ಅನೇಕ ಸ್ನೇಹಿತರಿಂದ ಲಕ್ನೋ ಕಾಂಗ್ರೆಸಿನ ಅಧಿವೇಶನ ಸಮಯಕ್ಕೆ ಅವರನ್ನು ಸ್ವಯಂ ಸೇವಕರನ್ನಾಗಿ ಲಕ್ನೋವಿಗೆ ಕರೆದುಕೊಂಡು ಹೋಗಬೇಕೆಂದು ಬರೆದ ಪತ್ರಗಳು ಲೆಕ್ಕವಿಲ್ಲದಷ್ಟು ನನಗೆ ಬರುತ್ತಲಿವೆ. ಇವರಲ್ಲಿ ಈ ಮಟ್ಟಿಗೆ ಹುರುಪೂ, ಸೇವೆಗಾಗಿ ಉತ್ಸಾಹವೂ ಇರುವದನ್ನು ನೋಡಿ ನನಗೆ ಬಹಳ ಸಂತೋಷವೆನಿಸುತ್ತದೆ. ನಮ್ಮಲ್ಲಿ ಜೀವ ಚೈತನ್ಯವಿರುವದೆಂಬುದರ ಕುರುಹು ಇದಾಗಿದೆ. ಸ್ತುತ್ಯಾರ್ಹವಾದ ವಿಷಯವಿದು.

ಆದರೆ ಲಕ್ನೋ ಕಾಂಗ್ರೆಸಿನ ಸ್ವಾಗತ ಮಂಡಳಿಯವರು ನನಗೆ ಬರೇ ಅವರ ಪ್ರಾಂತ್ಯದ ಸ್ವಯಂ ಸೇವಕರನ್ನು ತರಬೇಕು ಮಾಡಬೇಕೆಂದು ಅಪೇಕ್ಷಿಸಿಟ್ಟಿರುತ್ತಾರೆ. ಬೇರೆ ಕಡೆಗಳಿಂದ ಸ್ವಯಂ ಸೇವಕರನ್ನು ಕರೆದುಕೊಳ್ಳುವದಕ್ಕೆ ನನಗೆ ಅಧಿಕಾರ ಕೊಟ್ಟಿರುವದಿಲ್ಲ. ಇಲ್ಲಿಂದ ಕೆಲವು ಶಿಕ್ಷಕರನ್ನು ಮಾತ್ರ ಬೇಕೆಂದಿರುವದರಿಂದ ನಾನು ಶಿಕ್ಷಕರನ್ನು ಮಾತ್ರ ಕರೆಯಿಸಿದ್ದೇನೆ. ಆದುದರಿಂದ ಈ ವಿಷಯದಲ್ಲಿ ನನ್ನ ಸ್ನೇಹಿತರ ಆಶಾಭಂಗವನ್ನುಂಟುಮಾಡಿದ್ದಕ್ಕೆ ನಾನು ವ್ಯಸನಪಡುತ್ತೇನೆ. ಲಕ್ನೋ ಕಾಂಗ್ರೆಸಿನ ಸಮಯಕ್ಕೆ ಅಲ್ಲಿಗೆ ಯಾರನ್ನೂ ಕರೆದುಕೊಂಡು ಹೋಗಲು ನನಗೆ ಸಾಧ್ಯವಿಲ್ಲ.

ಬೇರೆ ಪ್ರಾಂತಗಳವರು ಸ್ವಾಗತಮಂಡಳಿಗೆ ಈ ವಿಷಯದಲ್ಲಿ ಪತ್ರ ಬರೆಯಬೇಕಾದ್ದಿಲ್ಲ. ಅನೇಕ ವರ್ಷಗಳಿಂದ ಯಾವ ಪ್ರಾಂತದಲ್ಲಿ ಕಾಂಗ್ರೆಸು ಜರಗುವದೋ ಅಲ್ಲಿನವರನ್ನೇ ಸ್ವಯಂ ಸೇವಕರನ್ನಾಗಿ ತರಬೇತು ಮಾಡುವ ಪದ್ಧತಿಯು ರೂಢಿಯಲ್ಲಿರುವದರಿಂದ ಲಕ್ನೋ ಮತ್ತು ಮಧ್ಯ ಪ್ರಾಂತದವರೂ ಸಹ ಹಾಗೆಯೇ ವರ್ತಿಸುವರು

EMPIRE OF INDIA LIFE ASSURANCE CO:, LTD.

ESTD. 1897.

TEN YEARS' PROGRESS.

	1925	1935
	Rs.	Rs.
Income	45,50,127	73,28,467
New Assurances	78,07,060	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— Empire of India Life Building, BOMAY. 52—12 Branch Office:— 152/3—Commercial Street, BANGALORE.

ಪ್ರಸಿದ್ಧ ಔಷಧಗಳು.

ಮಲೇರಿಯೂಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಮಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ. ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯೂಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲಿ ಮತ್ತೆ ಬಿಡಲಾರಿರಿ.

ತಯಾರಿಸುವವರು:—ದಿ ನವರತ್ನ ಫಾರ್ಮಸಿ,
ಪೋ. ಬಾ. ನಂಬರ್ 68, ಕೊಚಿನ್.

ಸ್ಪೆಷಲಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ. 52—37
ಏಜೆಂಟ್—ವಿ. ಬಿ. ಕಾಮತ್, ಮೆಹದೇವಪೇಟೆ, ಮಡಿಕೇರಿ.

ನವರತ್ನ ಫಾರ್ಮಸಿ,

NOTICE.

Mr. C. P. Appachu has been appointed by the Coffee Growers Association of India to recruit members (both full and Associate) for the association.

Sunticoppa, W. A. DAVIES.
1–2–1936. (*Secretary.*)

ಬೇಕಾಗಿದ್ದಾರೆ.

'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಕುಶಲರೂ, ವ್ಯಾಪಕರೂ ಆದ ಏಜಂಟರು ಬೇಕು. ವೃದ್ಧಿಯಿಟ್ಟು ಕೆಲಸ ಮಾಡುವವರಿಗೆ ಒಳ್ಳೆ ಸಂದರ್ಭ. ಯೋಗ್ಯ ಕಮಿಷನ್‌ಗಳು ಕೊಡಲಾಗುವದು. ಹೆಚ್ಚಿನ ಮಾಹಿತಿಗೆ ಈ ಕಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಯಿಸಿರಿ.

ವ್ಯವಸ್ಥಾಪಕರು,
"ಕೊಡಗು" ಲಿಮಿಟೆಡ್,

ಡಾಕ್ಟರ್ ಮೇತ್ಯುಸ್ ಎಬ್ರಹಾಮ್ಸ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲಿ ತಿಳಿಯುವುದು. [52—17]

---

೪೦ ವರ್ಷಗಳಿಂದ ಅನುಭವಪಟು ಪ್ರಖ್ಯಾತಿ ಹೊಂದಿದ

ಕರ್ಕಕಂಪನಿ ೧೮೫೩

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಬರುವ ಜ್ವರ, ಪುಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಪಾಲು ಖರ್ಚಿಗೆ ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರು ಕರ್ಕೆ,
(25—19) ಮುಖ್ಯ ಕಂಪೆನಿ,
ಗಿರಗಾಂವ, ಮುಂಬಯಿ.

SHIROMANI NARAYANACHARYA
Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರವಾಣದ ಕಂತಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 4ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿಕ್ಚಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
52—24 ಚೌಖಂಬಾ ಬೆನಾರಸ್, (ಕಾಶೀ.)

ಗುಂಡು ಹೊಡೆಯುವ ಕ್ರಮಗಳು.
ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—
ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತೀ ಉಪಯುಕ್ತ ಸೂಚನೆಗಳಿವೆ.

Goolamhusain Allibhoy & Sons. Ltd.,
26—19 210, Abdulrehman Street, BOMBAY 3.

ಧಾತುಪುಷ್ಪಿ ಲೇಹ

ಸ್ವರ್ಣ ಕಲ್ಪದ ಸಾಲಾವಿಶ್ರಿ ವಿಶ್ರಿತ.

ಇದು ಒಲಹೀನರಿಗೆ ಅದ್ಭುತವಾದ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರ ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಆಶಕ್ತತೆ, ಇವುಗಳನ್ನೆಲ್ಲಾ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯ್ಯ, ಸಂಭೋಗ ಶಕ್ತಿಯನ್ನು ಮತ್ತು ಜ್ಞಾಪಕ ಶಕ್ತಿಯನ್ನು ವೃದ್ಧಿ ಮಾಡುವುದು. ಶರೀರಕ್ಕೆ ಆರೋಗ್ಯವನ್ನೂ ದಿವ್ಯ ಶಕ್ತಿಯನ್ನೂ, ಕಾಂತಿಯನ್ನೂ ಉಂಟುಮಾಡುವುದು.
ಡಬ್ಬಿ 1ರ ರೂ. 2—8—0. 3ಕ್ಕೆ ರೂ. 7—0—0

ಮಲೇರಿಯಾ ನಿವಾರಿಣಿ.

ಮಲಬದ್ಧತೆ, ಚಳಿಜ್ವರ, ದಿನಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಗೆಡ್ಡ ಬಂದ ಜ್ವರ, ಪುರಾಣ ಜ್ವರ, ವಾಯಿದೆ ಜ್ವರ, ಯಿನುಫ್ಲುಯೆಂಜಾ, ನಿವೋಸಿಯಂ ಜ್ವರ, ಕಫ ಜ್ವರ, ಬಳಜ್ವರ, ಇವುಗಳನ್ನೆಲ್ಲಾ ಹೋಗಲಾಡಿಸಿ ಶಕ್ತಿಯನ್ನುಂಟುಮಾಡುವದು.
ಬಾಟ್ಲಿ 1ರ ರೂ. 1—8—0. ಸಣ್ಣ ಬಾಟ್ಲಿಗೆ 0—13—0.

ಅಶೋಕಾರಿಷ್ಟ ಮತ್ತು ಮೂತ್ರ

ಇದು ಸ್ತ್ರೀಯರಿಗೆ ಉತ್ತಮವಾದ ಟಾನಿಕ್. ಋತುಶೂಲೆ, ಕ್ರಮತಪ್ಪಿ ಮುಟ್ಟಾಗುವಿಕೆ, ಅತಿರೇಕ ಅಥವಾ ಅತ್ಯಲ್ಪ ಸ್ರಾವ, ಮುಟ್ಟು ಸಂಪೂರ್ಣವಾಗಿ ನಿಲ್ಲುವುದು, ಬಿಳುಪು ಹೋಗುವುದು, ಬಂಜೆತನ ನಡುವಿನ ನೋವು, ರಕ್ತಹೀನತೆ, ಒಳಜ್ವರ, ತಲೆನೋವು, ಮಲಬದ್ಧತೆ, ಕೈಕಾಲು ಬಚ್ಚುವುದು, ಅಕಾಲದಲ್ಲಿ ಗರ್ಭಪತನವಾಗುವಿಕೆ ಮತ್ತು ಸ್ತ್ರೀಯರಿಗೆ ಸಂಬಂಧಪಟ್ಟ ಇತರ ಎಲ್ಲಾ ದೋಷಗಳನ್ನು ಹೋಗಲಾಡಿಸಿ ಸೌಂದರ್ಯವನ್ನೂ ತೇಜಸ್ಸನ್ನೂ ಉಂಟುಮಾಡುತ್ತದೆ. ಬಾಟ್ಲಿ 1ರ ರೂ. 2—4—0

ರಕ್ತಶೋಧಕ.

ದೇಹದೊಳಗಿನ ರಕ್ತವು ಕೆಟ್ಟುಹೋದ ಚರ್ಮದೆಸೆಯಿಂದ ಉಂಟಾಗುವ ಕುರು, ಕಜ್ಜಿ: ವೈತುರಿಸುವಿಕೆ, ಕಲೆ, ವ್ರಣ, ಫರಂಗಿ ಸಂದು ಸಂಧು ನೋವು, ಮೇಹ, ವಾತ ಇವುಗಳ ಮೇಲೆ ದಿವ್ಯ ಔಷಧಿ.
ಬಾಟ್ಲಿ 1ರ ರೂ. 1—2—0, 3 ಬಾಟ್ಲಿಗಳಿಗೆ 3—4—0.

ಕೆಟಲಾಗಿಗೆ ಬರಿರಿ. ಕಾಯಿಲೆ ಸಂಗತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ಚುನಾಯಿಸಿ ರವಾನಿಸಬಹುದು.

ಎಂ. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್. ರಥಬೀದಿ, ಮಂಗಳೂರು.

(1) ಎ ಬಿ. ಕಾಮಯ್ಯ. ಮಹದೇವಪೇಟೆ, ಮಡಿಕೇರಿ (ಕೊಡಗು).
(52—31) (2) ಎ. ಎಸ್. ಮಾಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪ.

ಎರಡು ಕೆಲಸಕ್ಕೆಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸುಂದರ್ಯವನ್ನೂ ಮೂಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ ಚರ್ಮವನ್ನು ಎಚ್ಚರಿಕೆಯಿಂದ ಸೋದುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲೂ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

52—50 ಬೆಂಗಳೂರು.

ಸ್ವದೇಶ.

ಮಡಿಕೇರಿ ಕುದುರೆ ಜೂಜುಗಳು ಈ ತಾ. 21 ಮತ್ತು 28 ರಲ್ಲಿ ನಡೆಯುವುವು.

ಈ ವಾರ ಮಡಿಕೇರಿಯಲ್ಲಿ ರೂ. 130 ರಿಂದ 133 ರ ವರೆಗೆ ಕಾಫಿ ಖಂಡಿಗೆ ಬೆಲೆ ಇರುವುದೆಂದೂ ಯೂಲಕ್ಕೆ ಮಣಕ್ಕೆ ರೂ. 34–35 ಬೆಲೆ ಇರುವುದೆಂದೂ ತಿಳಿಯುತ್ತೇವೆ.

ಮಡಿಕೇರಿಯಲ್ಲಿ ಮೂರ್ಚೆ ತಾ. 1 ರಿಂದ ಸ್ಥಾಪಿಸಲ್ಪಡಲಿಕ್ಕಿರುವ ಮುನ್ಸಿಫ್ ಕೋರ್ಟಿಗೆ ಮೆ. ಪುಚ್ಚಿಮಾಡ ನಾಣಯ್ಯ ಬಿ. ಎ., ಬಿ. ಎಲ್., ರವರು ಮುನ್ಸಿಫರಾಗಿ ನೇಮಿಸಲ್ಪಟ್ಟಿರುವರು.

ಹಲವು ವರ್ಷಗಳಿಂದ ಸ್ಪೆನ್ಸರ್ಸ್ ಕಂಪೆನಿಯಲ್ಲಿ ಕ್ಲಾರ್ಕರಾಗಿದ್ದ ಮೆ. ಚೆಪ್ಪುಡೀರ ಅಪ್ಪಚ್ಚನವರು ಫೆಬ್ರವರಿ ಪಾರಂಭದಿಂದ ಕಾಫಿ ಗ್ರೋವರ್ಸ್ ಎಸೋಸಿಯೇಶನ್ನಿನವರ ಪ್ರೊಸಗಾಂಡಿಸ್ಟರಾಗಿ ನೇಮಿಸಲ್ಪಟ್ಟಿರುವರು.

ಮಡಿಕೇರಿ ಸಿದ್ದಾಪುರ ರಸ್ತೆಯ 8ನೇ ಮೈಲು ಬಳಿ ಕೆಲವು ದಿವಸಗಳ ಹಿಂದೆ ಕ್ರಿಸ್ತಾನನ್ನು ಪಾಲೆ ಅಂಗರನೆಂಬವನು ಕೊಂದನೆಂಬ ಕೇಸು ಸೆಷನ್ಸ್ ಕೋರ್ಟಿನಲ್ಲಿ ಈ ತಾ. 11ರಿಂದ ಮೂರು ದಿವಸ ವಿಚಾರಣೆ ನಡೆದಿದೆ.

ದಕ್ಷಿಣ ಕೊಡಗು ದನಗಳ, ತರಕಾರಿ, ಕೋಳಿ ಮತ್ತು ಹೆಣ್ಣಿಗೆ ಕೆಲಸಗಳ ಪ್ರದರ್ಶನವು ಕಳೆದ ತಾ. 9 ಕ್ಕೆ ಗೋಣಿ ಕೊಪ್ಪಲಲ್ಲಿ ಕೊನೆಗೊಂಡಿತು. ಆ ಪ್ರದರ್ಶನಗಳಲ್ಲಿ ಬಹು ಮಾನವನ್ನು ಪಡೆದವರಿಗೆ ಕಮಿಷನರರು ಇನಾಮುಗಳನ್ನು ಆ ದಿನವೇ ಹಂಚಿದರು.

ವೀರಾಜಪೇಟೆಯಲ್ಲಿ III ಫಾರಂನಲ್ಲಿ ಓದುತ್ತಿದ್ದ ಪುಟ್ಟಿಚಂಡ ಮನೆಯ ಹುಡುಗನೊಬ್ಬನು ತಾ. 10 ರಲ್ಲಿ ಶಾಲೆಗೆ ಬರುತ್ತಿರುವಾಗ್ಗೆ ಹಾವಿಯಲ್ಲಿ ಅಕಸ್ಮಾತ್ತಾಗಿ ಒಂದು ತೋಡಿಗೆ ಬಿದ್ದು ಜಖಂಗೊಂಡು ಆಸ್ಪತ್ರೆಗೆ ಒಯ್ಯಲಾಗಿ ಅಲ್ಲಿ ವೃತನಾದನೆಂದು ವರ್ತಮಾನ.

ಈ ವಾರ ಒಳ್ಳೆತೋಡಿನಲ್ಲಿ ನಡೆದ ಕೋಳಿ ಕಾಳಗ ಸಮಯದಲ್ಲಿ ಹೊಟೇಲು ಕೆಲಸ ಮಾಡುತ್ತಿದ್ದ 15 ವರ್ಷ ವಯಸ್ಸಿನ ಮೂಪಿಳ್ಳೆ ಹುಡುಗನೊಬ್ಬನು ರಾತ್ರೆ ನೀರು ತೆಗೆಯಲು ಹೋದಾಗ್ಯೆ ಅಕಸ್ಮಾತ್ ಹೊಳೆಗೆ ಬಿದ್ದು ಸಮ್ಮಹೋದನೆಂದು ವರ್ತಮಾನ.

ವಿವಿಧ ಧರ್ಮ ಸಮ್ಮೇಳನ, ಧರ್ಮ ಸ್ಥಳ ಇದರ ಸಂಸ್ಥಾಪಕರು ಮಡಿಕೇರಿ ಹೈಸ್ಕೂಲಿನ ಸಂಸ್ಕೃತ ಪಂಡಿತರಾದ ಶ್ರೀ ಓಡ್ಲಮನೆ ಆತ್ಮರಾಮ ಶಾಸ್ತ್ರಿಗಳವರಿಗೆ ಅವರ 'ಅದ್ವೈತ ಮತದ ರೀತಿಯಿಂದ ಈಶ್ವರ ಜ್ಞಾನ' ಎಂಬ ಪ್ರಭಂದಕ್ಕೆ ಒಂದು ಸುವರ್ಣ ಪದಕವನ್ನು ಬಹುಮಾನಿಸಿರುವರೆಂಬದಕ್ಕೆ ಸಂತೋಷಪಡುತ್ತೇವೆ.

ಕೊಟ್ಟೂರು ಶಾಲಾ ಹೆಡ್ ಮಾಸ್ಟರಾದ ಮೆ. ಪಿ. ಎ. ಬಸಪ್ಪನವರನ್ನು ವೀರಾಜಪೇಟೆ ಹೈಸ್ಕೂಲಿಗೂ, ಸೋಮವಾರಪೇಟೆಯಲ್ಲಿ ಅಸಿಸ್ಟೆಂಟ್ ಮಾಸ್ಟರಾಗಿದ್ದ ಮೆ ಎನ್. ಎನ್. ಕಾಳಪ್ಪನವರನ್ನು ಕೊಟ್ಟೂರು ಶಾಲೆಯ ಹೆಡ್ ಮಾಸ್ಟರಾಗಿಯೂ ಮೆ. ನಾಯಡ ಚಿಂಣಪ್ಪನವರನ್ನು ಸೋಮವಾರಪೇಟೆ ಸ್ಕೂಲಿನ ಅಸಿಸ್ಟೆಂಟ್ ಮಾಸ್ಟರಾಗಿಯೂ ನೇಮಿಸಲಾಗಿದೆ.

ಹಿಂದೂದೇಶ.

ಮಾನ್ಯ ಆಗಾ ಖಾನರು ಇದೇ ತಾ. 13 ರಲ್ಲಿ ಡಿಲ್ಲಿಗೆ ದಯೆಮಾಡಿಸುವರೆಂದೂ ಆಗ ಮುಸ್ಲಿಂ ಮುಖಂಡರದೊಂದು ಸಭೆ ಸೇರಿ ಹೊಸ ರಾಜ್ಯರಚನೆಯ ಕುರಿತು ಸಮಾಲೋಚಿಸುವರೆಂದೂ ಪ್ರಕಟವಾಗಿದೆ.

ಅಹಮ್ಮದಾಬಾದಿನ ಕುಬೇರರಾದ ಮಿಲ್ಲಿನ ಮೂಲಕ ಸೇಟ್ ಕಸ್ತೂಲ್ ಭಾಯ್ ಲಾಲಾ ಭಾಯ್ ಯವರು ಅಲ್ಲಿನ ಇಂಜಿನಿಯರಿಂಗ್ ಕಾಲೇಜಿನ ಸ್ಥಾಪನೆಗಾಗಿ 15 ಲಕ್ಷ ರೂ ಪಾಯಿಗಳ ದಾನ ಮಾಡಿರುವರು ಸ್ತುತ್ಯ.

ಗ್ವಾಲಿಯರ್ ಸಂಸ್ಥಾನದ ಸಿಕ್ಕಿ ಎಂಬ ಗ್ರಾಮದಲ್ಲಿ, ಠಾಕೂರ್ ರಘುವೀರ್ ಸಿಂಗ ಎಂಬವರು ಪತ್ನಿ ಸುಮಾರು 60 ವರ್ಷದವಳು, ಮೃತನಾದ ಪತಿಯ ಚಿತಿಯಲ್ಲಿ ಸತಿಸಹಗಮನ ಮಾಡಿದಳು. ಈ ಸಂಬಂಧ 3 ಮಂದಿಯ ಕೈದು ನಡೆದಿದೆ.

ಮಲಬಾರಿನ ಹಾಯರ್ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಲ್ಲಿ ನಡೆದ ಬಾಯಿವಾಕ್ಯ ಸ್ಪರ್ಧೆಯಲ್ಲಿ ಕಣ್ಣಾನೂರು ಬಾಲಿಕಾ ಶಾಲೆಯ ಮಾಧವಿ ಎಂಬ ಹರಿಜನ ಬಾಲಿಕೆ ಪ್ರಥಮ ಸ್ಥಾನವನ್ನು ಹೊಂದಿ, ಒಂದು ಬಂಗಾರದ ಮೆಡಲನ್ನೂ, ಬೆಳ್ಳಿಯ ಬಟ್ಟಲನ್ನೂ ಬಹುಮಾನವಾಗಿ ಪಡೆದಳು.

'ಜುಂಬನ' ಎಂಬ ಒಂದು ಗುಜರಾತಿ ಮಾಸಪತ್ರಿಕೆಯಲ್ಲಿ ಅಸಹ್ಯಕರವಾದುದೊಂದು ಲೇಖವು ಪ್ರಕಟಿಸಲ್ಪಟ್ಟಿದೆ ಎಂಬ ಆರೋಪದ ಮೇಲೆ, ಬೊಂಬಯಿಯ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು, ಆ ಪತ್ರದ ಸಂಪಾದಕರಿಗೆ 3 ತಿಂಗಳ ಕಠಿನ ಸಜೆಯನ್ನೂ 300 ರೂಪಾಯಿಗಳ ಜುಲ್ಮಾನೆಯನ್ನೂ ವಿಧಿಸಿರುವರು.

ಕಲ್ಕತ್ತಾ ಬಂದರಿನ ಪೊಲೀಸಿನವರು ಕಳೆದ ವಾರ ದಡಕ್ಕೆ ಒಂದು ಸೇರಿದ ಸಿಟಿ ಆಫ್ ಕೈನ್ಸ್ ಚರ್ಚ್ ಎಂಬ ಹಡಗನ್ನು ಶೋಧನೆ ಮಾಡಿ ಸಿಕ್ಕಿದ ಸ್ಪೇಯನ್ ದೇಶದಲ್ಲಿ ತಯಾರಾದ 40 ಬಂದೂಕಗಳನ್ನೂ, 3 000 ತೋಟಾಗಳನ್ನೂ ಸ್ವಾಧೀನಪಡಿಸಿಕೊಂಡು ಆ ಹಡಗಿನ ಅಧಿಕಾರಿ ವಿಸಹ್ಯಾಕಾರಿ 5ರ ನಂದಿ ಚೀನಾ ದೇಶೀಯರನ್ನು ದಸ್ತಗಿರಿ ಮಾಡಿರುತ್ತಾರೆ.

ಪಂಡಿತ ಜವ್ಹರಲಾಲರು ಲಂಡನ್ನಿಗೆ ಚಿತ್ಕೈಸಿ ಅಲ್ಲಿ ಅಭೂತಪೂರ್ವವಾದ ಸ್ವಾಗತ ಪಡೆದರು. ಗಾಂಧಿಯವರ ಸಂದರ್ಶನದ ಬಳಿಕ ಇಷ್ಟು ದೊಡ್ಡ ಹಿಂದೀಯರ ಗುಂಪು ಎಂದೂ ಅಲ್ಲಿ ನೆರೆದಿರಲಿಲ್ಲ. ಪಂಡಿತರು ಇಂಡಿಯಾ ಆಫೀಸಿನ ಕುರಿತ, ಒಂದು ಭಾಷಣ ಕೊಟ್ಟು, ಇಂಡಿಯದ ಸಮಸ್ಯೆಗಳ ಕುರಿತಾದ ಹಲವು ಪ್ರಶ್ನೆಗಳಿಗೆ ಸಮರ್ಪಕ ಉತ್ತರ ಕೊಟ್ಟಿರುವರು.

ಕೊಚ್ಚಿನ್ ಸಂಸ್ಥಾನದಲ್ಲಿ ಪ್ರಕಟವಾಗುವ 'ವಿಕಟನ್' ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನವು ರಾಜದ್ರೋಹಕವಾಗಿದ್ದಿತೆಂಬ ಆಪಾದನೆಯ ಮೇಲೆ ಮೇಜಿಸ್ಟ್ರೇಟರು ಸಂಪಾದಕರಾದ ಮೆ. ನನ್ನು ಮೇನನ್, ಪ್ರಿಂಟರ್ ರಾಮು ಕರೂಪ್ ಮತ್ತು ಲೇಖನ ಬರೆದ ಪಿ ರಾಮುವರಿಯರ್ ಇವರುಗಳಿಗೂ ತಲಾ ನಾಲ್ಕು ತಿಂಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಹಲವು ದಿನಗಳಿಂದ, ಲಕ್ನೋ ಜೈಲಿನಲ್ಲಿ ಉಪವಾಸ ವ್ರತವಾಚರಿಸುತ್ತಿರುವ ಜೋಗೀಶ್ ಚಂದ್ರ ಚಟರ್ಜಿ ಎಂಬ ಕಾಕೋರಿ ಒಳಸಂಚಿನ ಕೈದಿಯ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸಲು, ಲಕ್ನೋ ಕಾಂಗ್ರೆಸ್ ಮುಂದಿ ಒಂದು ಮೆರವಣಿಗೆಯನ್ನೂ, ಸಾರ್ವಜನಿಕ ಸಭೆಯನ್ನೂ ನಡೆಸಿದರು. ಅಹೋರಿನ ಸೋತಿಯಲಿಸ್ಟರೂ ಸಭೆಗೂಡಿ ಈ ಕೈದಿಯ ಕೇಳಿಕೆಗಳನ್ನು ಮನ್ನಿಸುವಂತೆ ಸರಕಾರವನ್ನು ಪ್ರಾರ್ಥಿಸಿಕೊಂಡಿರುವರು

ಎಸೆಂಬ್ಲಿ ಮೆಂಬರರಾದ ಪಂಡಿತ ಕೃಷ್ಣಕಾಂತ ಮಾಳವ್ಯರು ಎಸೆಂಬ್ಲಿಯಲ್ಲಿ ಕೊಟ್ಟ ಭಾಷಣವೊಂದನ್ನು—ಪತ್ರಿಕೆಗಳು ಪ್ರಕಟಿಸಬಾರದೆಂಬ ಎಚ್ಚರಿಕೆ ಕೊಟ್ಟಿದ್ದರೂ—'ಅಭ್ಯುದಯ' ಪತ್ರಿಕೆ ಪ್ರಕಟಿಸಿದ ಕಾರಣ ಆ ಪತ್ರಿಕೆಯಿಂದ 25.00 ರೂಪಾಯಿಗಳ ಭದ್ರತೆ ಕೇಳಲಾಗಿದೆ. ಈ ಸಂಬಂಧ ಪಂಡಿತರು ತಾವೇ ಆ ಭದ್ರತೆ ಕಟ್ಟಿ, ಈ ಕುರಿತು ನ್ಯಾಯಸ್ಥಾನದಲ್ಲಿ ಇದರ ನ್ಯಾಯವನ್ನು ದೊಂಕಿಸಿಕೊಳ್ಳಲು ಆಲೋಚಿಸಿರುವರೆಂದು ತಿಳಿದುಬರುತ್ತದೆ.

ಲಕ್ನೋ ಕಾಂಗ್ರೆಸಿನ ಸಮಯದ ವಸ್ತು ಪ್ರದರ್ಶನಕ್ಕೆ ಅಪೂರ್ವ ಸಾಧನೆಯೆಂದು, ಈಮೊಲ್ಲೆ ಐತಿಹಾಸಿಕ ಬೆಲೆಯ ಪದಾರ್ಥಗಳಾಗಲೇ ಬರತೊಡಗಿವೆ. ಇದರಲ್ಲೊಂದು, ಚಕ್ರವರ್ತಿ ಷಹಜಹಾನನೇ ಹೇಳಿ ಬರೆಯಿಸಿದನೆಂಬ ವೈಭವದ ಸಾಮ್ರಾಜ್ಯದ ಚರಿತ್ರೆ. ಎಂದರೆ ಸುಮಾರು 1230 ನೇ ಹಿಜರಿಯಲ್ಲಿ ಬರೆದ 10 ಸಾವಿರ ಬೆಲೆಯುಳ್ಳ, 14 ಮಂದಿ ಇತಿಹಾಸಕಾರ ಜೀವನ ಚರಿತ್ರೆ. ಇನ್ನೊಂದು ಕ್ರಿ. ಶ. 6ನೇ ಶತಮಾನದ ತಾಳೆ ಪತ್ರದ ಒಂದು ಪುಸ್ತಕ.

ವಿದೇಶ.

ಇರಾಕಿನಲ್ಲಿ ಬ್ರಿಟಿಷರ ವ್ಯಾಪಾರ ವರ್ಷ ವರ್ಷ ಕಡೆಮೆಯಾಗುತ್ತಿದೆ. ಜಪಾನರು ಜಾಣರು; ಅವರು ಅಲ್ಲಿ ಬ್ರಿಟಿಷರ ವ್ಯಾಪಾರವನ್ನು ಹೊಡೆಯುತ್ತಿದ್ದಾರೆ.

ಲಂಡನ್ ಬ್ಯಾಂಕುಗಳಲ್ಲಿ ಹಣವನ್ನು ಗ್ರಾಹಕರಿಂದ ಸ್ವೀಕರಿಸಿ ಪಡೆದ ಹಣಕ್ಕೆ ರೀತಿ ಕೊಡುವ ಒಂದು ಹೊಸ ಯಂತ್ರಸಾಧನ ಸದ್ಯದಲ್ಲೇ ಬಳಿಕೆಗೆ ಬರುತ್ತದೆ.

ಟ್ರಾನ್ಸ್‌ವಾಲ್ ವಿಶ್ವಾಂತ್ಯದಲ್ಲಿ ಭಾರೀ ಬಿರುಗಾಳಿ! ಮಳೆ!! ಮಂಜುಗಡ್ಡೆಗಳೂ ತೆಂಗಿನ ಕಾಯಷ್ಟು ದೊಡ್ಡವು ಅರ್ಧ ಗಂಟೆಯಲ್ಲಿ ಬಿದ್ದಿವೆ. ಒಟ್ಟಿಗೆ ಅಲ್ಲಿ 15 ನಿಮಿಟುಗಳಲ್ಲಿ 15 ಇಂಚು ಮಳೆ. 19 ಮಂದಿ ನಿವಾಸಿಗಳು ಸತ್ತಿದ್ದಾರೆಂದು ವಾರ್ತೆ.

ಗ್ರಾಮಫೋನಿನಂತೆ ಮಾತಾಡುವ ಪತ್ರಿಕೆಗಳು. ಇದು ಅರ್ಜಂಟೈನಿನ ಒಬ್ಬ ಇಂಜಿನಿಯರನ 9 ವರ್ಷದ ಅವಿಶ್ರಾಂತ ಶ್ರಮದ ಫಲ. ದಕ್ಷಿಣ ಅಮೇರಿಕದ ಕೆಲವು ಪತ್ರಿಕೆಗಳಾಗಲೇ ಹೀಗೆ ಮಾತಾಡಲು ಆರಂಭಿಸಿವೆ. ಮಾತಾಡುವ ಈ ಪತ್ರಿಕೆಗಳ ರಿಕಾರ್ಡುಗಳೂ ಕಾಗದದ್ದೇ. ಅದರ ಆಕಾರ 17 ಮತ್ತು 20 ಅಂಗುಲ. ಇದರಲ್ಲಿ ಕಿರಣಗಳ ಪ್ರಯೋಗವಾಗುವುದಿದೆ.

ಯುದ್ಧ ವಾರ್ತೆ.

ಫೆಬ್ರವರಿ ತಾ. 9.

ಚಕ್ರವರ್ತಿಗಳನ್ನು ಕೊಲ್ಲಲು ವಿಶ್ವ ಪ್ರಯತ್ನ.

ಚಕ್ರವರ್ತಿಗಳನ್ನು ಡೆಸ್ಸಿನಲ್ಲಿ ಧ್ವಂಸ ಮಾಡಬೇಕೆಂದು ಇಟೆಲಿಯ ವಿಮಾನಗಳು ಡೆಸ್ಸಿಯ ಮೇಲೆ ಒಂದು ಗಂಟೆಯ ವರೆಗೆ ಬಾಂಬುಗಳನ್ನು ಸುರಿದವು. ಚಕ್ರವರ್ತಿಗಳು ಧೈರ್ಯದಿಂದ ಒಳಹೊಕ್ಕದೆ ಅರಮನೆಯ ಹೊರಗೆ ನಿಂತು ಅವುಗಳಿಗೆ ಗುಂಡು ಹೊಡೆಸುತ್ತಿದ್ದರು ಅನೇಕ ವಿಮಾನಗಳಿಗೆ ಕೋವಿ ಗುಂಡು ತಾಗಿರುವುದಾದರೂ ಒಂದೂ ನೆಲಕ್ಕುರುಳಿರುವುದಿಲ್ಲ.

ಫೆಬ್ರವರಿ ತಾ. 10.

ಡೆಸ್ಸಿ ಬಾಂಬಿನ ಪರಿಣಾಮ,

ನಿನ್ನೆಯ ಬಾಂಬಿನಿಂದ ಇಬ್ಬರು ಮೃತರಾದರು. ನಾಲ್ಕು ಮಂದಿ ಜಖಂಗೊಂಡರು. ಅಲ್ಲದೆ ಅನೇಕ ಗುಡಿಸಲುಗಳು ಬೆಂಕಿ ಹೊತ್ತಿ ನಾಶವಾದವು.

ಮಕಾಲೆಯನ್ನು ಹಿಡಿಯುವ ಪ್ರಯತ್ನ.

ಮಕಾಲೆಯನ್ನು ಹಿಡಿಯಲು ರಾಸ್ ಸಯಸಮರ ದಳವು ಮುಂದೆಬಿತ್ತು. ಆಗ ಇಟೆಲಿಯರು ಪಲ್ಲಾಗಿ ತಮ್ಮ ಗಳಿಂದ ಆರು ಅಡಿ ಎತ್ತರದ ಬೇಲಿಗಳ ಮೂರು ಸಾಲುಗಳನ್ನು ಹೆಣದಿರುವುದರಿಂದ ಅಬಿಸೀನಿಯಾ ಸೈನಿಕರಿಗೆ ಫಕ್ಕನೆ ಮುಂದೊತ್ತಲು ಸಾಧ್ಯವಾಗಲಿಲ್ಲ. ಆದರೂ ಅಬಿಸೀನಿಯರು ಬೇಲಿಯ ಮೇಲಿಂದ ಹತ್ತಲುಸಕ್ಕಮಿಸಲು ಮೆಶಿನುಗನ್ನುಗಳ ಗುಂಡಿನ ಹೊಡೆತಕ್ಕೆ ಸಿಕ್ಕಿ ಹಿಂದಿರುಗಬೇಕಾಯಿತು.

ಫೆಬ್ರವರಿ ತಾ. 11

ಕೊರಂ ಮೇಲೆ ಬಾಂಬು.

ಡೆಸ್ಸಿಯಲ್ಲಿ ಚಕ್ರವರ್ತಿಗಳಿರುವರೆಂದೂ, ಅಲ್ಲಿ ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ಸೈನ್ಯ ಸಂಗ್ರಹವಾಗುತ್ತದೆಂದೂ, ಆ ಪ್ರದೇಶವನ್ನೆಲ್ಲ ಇಟೆಲಿಯೂನರು ಬಾಂಬಿನಿಂದ ಧ್ವಂಸ ಗೈಯುತ್ತಲಿರುವರು. ತಾ. 9 ರಲ್ಲಿ ಕೊರಂ, ಅಶಾಂಗಿ ಮತ್ತು ವಿಕೋ ಎಂಬ ಗ್ರಾಮಗಳ ಮೇಲೆ ಬಾಂಬುಗಳನ್ನು ಸುರಿಸಿರುವರು. ಆದರೆ ಹೆಚ್ಚಿ ಹಾನಿಯಾಗಿರುವದಿಲ್ಲ.

ಒಗಾಡಿನಿನಲ್ಲಿ ಕದನ.

ಸೆಸ್ವಾಬೆನೆ ಎಂಬಲ್ಲಿಂದ 50 ಮೈಲು ದಕ್ಷಿಣದಲ್ಲಿರುವ ಕರಾಟಿಯಿಂದ ಇಟೆಲಿಯನ್ನರನ್ನು ಅಬಿಸೀನಿಯರು ಓಡಿಸಿದರು. ಇಕ್ಕೆಡೆಗಳಲ್ಲೂ ಅಪರಿಮಿತ ಪ್ರಾಣಹಾನಿಯಾಗಿರುವದು. ಆದರೂ ಇಟೆಲಿಯವರು ಹಿಮ್ಮೆಟ್ಟಬೇಕಾಯಿತು.

ಇಟೆಲಿಯ ಸೈನ್ಯ ರಫ್ತು.

ಜನವರಿ 25 ರಿಂದ ಫೆಬ್ರವರಿ 7 ರ ವಳಗೆ ಸುಮಾರು 30,000 ಸೈನ್ಯವು ಇಟೆಲಿಯಿಂದ ಅಬಿಸೀನಿಯಾದ ಕಡೆ ಬಂದಿದೆ. ಈ ಸೈನ್ಯದೊಡನೆ 2300 ಟನ್ನು ಗುರಿಡಿನ ಸಾಮಗ್ರಿಗಳೂ 4000 ಟನ್ನು ಎಂಣೆಯೂ ಬಂದಿದೆ.

ಹಾಗೆಯೇ 7000 ಮಂದಿ ಇಟೆಲಿ ಸೈನಿಕರು ರೋಗಪೀಡಿತರಾಗಿ ಇಟೆಲಿಗೆ ಹಿಂತಿರುಗಿರುವರು.

ಇಟೆಲಿಯ ಪ್ರಕಟಣೆ.

ಕಳೆದ ಜನವರಿ ತಿಂಗಳಲ್ಲಿ ಇಟೆಲಿಯ ಬಿಳೀ ಸೈನಿಕರಲ್ಲಿ 341 ಮಂದಿ ಯುದ್ಧದಲ್ಲಿ ಮಡಿದರೆಂದೂ, 4 ಮಂದಿ ಘಾಯಗೊಂಡು ಮಡಿದರೆಂದೂ, ರೋಗದಿಂದ 92 ಮಂದಿ ವೃತರಾದರೆಂದೂ ಮೂವರು ಕಾಣೆಯಾಗಿರುವರೆಂದೂ ಇಟೆಲಿಯು ಪ್ರಕಟಣೆಯೊಂದು ತಿಳಿಸುತ್ತದೆ. ಈ ವರೆಗೆ ಇಟೆಲಿಯ ಬಿಳಿ ಸೈನಿಕರು 844 ಮೃತ್ಯು ನುಡಿದಿರುವವಂತೆ.

ಜನರಲ್ ಸಂಘದ ಕಮಿಟಿ ವಿಂಟಿಂಗು.

ಈ ಸಂಘದ ಕಾರ್ಯಕಾರಿ ಮಂಡಳಿಯ ವಿಂಟಿಂಗು ಈ ತಾ. 9 ರಲ್ಲಿ ಗೋಣಿಕೊಪ್ಪಲಲ್ಲಿ ನಡೆಯಿತು. ಸಂಘದ ಪ್ರೆಸಿಡೆಂಟರಾದ ಮೆ. ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಈ ಕೆಳಗಿನ ವಿಷಯಗಳು ಚರ್ಚಿಸಿ ತೀರ್ಮಾನಿಸಲ್ಪಟ್ಟವು.

1 'ಕೊಡಗಿನ ಅನ್‌ರಿಡೀಮ್ಡ್ ಜಾಗದಲ್ಲಿರುವ ಗಂಧದ ಮರಗಳಿಗೆ ಬೋನಸು ಕೊಡಲು ಮಾಡಿರುವ ಕರಡು ನಿಬಂಧನೆಗಳನ್ನು ತಿದ್ದುಪಡಿ ಮಾಡುವ ವಿಷಯ ಕಮಿಷನರರೊಂದಿಗೆ ಸಂಭಾಷಣೆ ನಡೆಸಲು ಈ ಸಂಘದ ಪರವಾಗಿ ಮೆ. ಗಳಾದ ಐ. ಪಿ. ಕಾರ್ಯಪ್ಪನವರು, ನಿಡ್ಡಂದ ಸುಬ್ಬಣಯ್ಯನವರು, ಯಸ್. ಯನ್. ರಾವ್-ಶೆಟ್ಟಿಯವರು, ಕೊಡಂದೆರ ಚಂಗಪ್ಪನವರು ಮತ್ತು ಬಿದ್ದಂಡ ಕಾರ್ಯಪ್ಪನವರು ಸೇರಿ ಕಮಿಷನರವರಲ್ಲಿಗೆ ಡೆಪ್ಯುಟೇಶನ್ ಹೋಗಬೇಕೆಂದು ತೀರ್ಮಾನಿಸಲಾಯಿತು.

2. 'ಮೇಲ್ಕಂಡ ನಿಬಂಧನೆಗಳನ್ನು ತಿದ್ದುಪಡಿ ಮಾಡಲು ಸರ್ಕಾರದವರು ಉದ್ಯೋಗಸ್ಥರಲ್ಲದ ಮೆಂಬರುಗಳ ಬಹುಮತವಿರುವ ಒಂದು ಕಮಿಟಿಯನ್ನು ನೇಮಿಸಬೇಕೆಂತಲೂ, ಆ ಕಮಿಟಿಯಲ್ಲಿ ಸಂಘದ ಪರವಾಗಿ ಡೆಪ್ಯುಟೇಶನ್ ಹೋಗುವ ಮಹನೀಯರುಗಳನ್ನೇ ಜನರ ಪ್ರತಿನಿಧಿ ಮೆಂಬರುಗಳಾಗಿ ಸೇರಿಸಿಕೊಳ್ಳಬೇಕೆಂತಲೂ ಡೆಪ್ಯುಟೇಶನ್ನಿನವರು ಕಮಿಷನರವರನ್ನು ಕೇಳಿಕೊಳ್ಳುವಂತೆ ನಿಶ್ಚಯಿಸಲಾಯಿತು.'

3. 'ಕಂದಾಯ ವೂಫಿ, ಭೂಮಿಗಿರ್ವಿ ಬ್ಯಾಂಕು ಮತ್ತು ರಾಜಕೀಯ ಸುಧಾರಣೆಗಳನ್ನು ಕುರಿತು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ದೇಶದ ಹಲವು ಭಾಗಗಳಲ್ಲಿ ನಡಿಸುತ್ತಿರುವ ವಿಂಟಿಂಗುಗಳ ಕಾರ್ಯಕ್ಕೆ ಕಮಿಟಿಯುವರು ಸಮ್ಮತಿಯನ್ನೀಯುವಂತೆ ತೀರ್ಮಾನಿಸಲಾಯಿತು.

ಪಿ ಐ ಬೆಳ್ಯಪ್ಪ,
(ಅಧ್ಯಕ್ಷರು.)

ನಾಪೋಕ್ಲು ಗವರ್ನಮೆಂಟು ಮೋಡಲ್ ಶಾಲೆಯು ಮಣಿಮುಹೋತ್ಸವದ ಕಾಣಿಕೆ.

ಕಥೆ ನೊದಲಾದ ವಿವಿಧ ಲೇಖನಗಳಿಂದಲೂ ಶಾಲೆಯ ಚಟುವಟಿಕೆಗಳ ವಿಷಯಗಳಿಂದಲೂ ಕೂಡಿದ ಪುಸ್ತಕ ಕೊಡಗಿನ ಪ್ರತಿಯೊಬ್ಬ ಮಹನೀಯರೂ ಸಂಗ್ರಹಿಸತಕ್ಕ ಪುಸ್ತಕ.

ಅಸಲೂಪದ ಪುಸ್ತಕ. ಬೆಲೆ ಆಣೆ 0—2—0 ಮಾತ್ರ.

ಖರ್ಚು ಕಳೆದು ಉಳಿಕೆಯಾಗುವ ಹಣವೆಲ್ಲವೂ ಶಾಲೆಯ ಬಡ ಹುಡುಗರ ಫಂಡಿಗೆ ಸೇರುತ್ತದೆ.

ಪುಸ್ತಕ ದೊರೆಯುವ ಸ್ಥಳ:—

ಕಾರ್ಯದರ್ಶಿ, ಬಾಲಿಕರ ಸಹಕಾರ ಸ್ಟೋರ್ಸ್, ಲಿಮಿಟೆಡ್, ನಾಪೋಕ್ಲು.

ಏಜೆಂಟರು, 'ವಿಶ್ವಕರ್ಣಾಟಕ,' ಮಡಿಕೇರಿ.

ಕೊಡಗು

ಫೆಬ್ರವರಿ ತಾ. ೧೪ನೇ ಶುಕ್ರವಾರ ೧೯೩೬.

ರಾಜಕೀಯ ಕೈದಿಗಳ ಸ್ಥಿತಿ.

ಕೆಲವು ವರ್ಷಗಳ ಹಿಂದೆ ಹಿಂದೂ ದೇಶದಲ್ಲಿ ಕೊಲೆ, ದರೋಡೆ, ಕಳ್ಳತನ ಮೋಸ ಮುಂತಾದ ತಕ್ಸೀರುಗಳನ್ನು ಮಾಡಿದವರೇ ಜೈಲುಗಳಲ್ಲಿ ಬಂಧನಕ್ಕೆ ಗುರಿಯಾಗುತ್ತಿದ್ದರು. ಆದರೆ ಇತ್ತಲಾಗಿ ನಿದ್ರೆಯಲ್ಲಿದ್ದ ಭಾರತೀಯರು ಎಚ್ಚತ್ತು ತಮ್ಮ ಮಾತೃಭೂಮಿಯ ಗುಲಾಮಗಿರಿಯನ್ನು ಹೋಗಲಾಡಿಸಲು ಸೊಂಟಕಟ್ಟಿದಂದಿನಿಂದ ಹಲವರು ರಾಜದ್ರೋಹದ ರಾಜಕೀಯ ತಕ್ಸೀರುಗಳಿಗಾಗಿ ಸೆರೆಮನೆಯಲ್ಲಿ ಮುಚ್ಚಲ್ಪಡುತ್ತಿರುವರು. ಕೆಲವು ಸಂದರ್ಭಗಳಲ್ಲಿ ನ್ಯಾಯಕೋರ್ಟುಗಳಲ್ಲಿ ವಿಚಾರವೇನೂ ನಡಿಸದೇನೇ ಹಲವರು 'ಡೆಟಿನ್ಯೂ'ಗಳಾಗಿ ಬಂದಿಖಾನೆಯಲ್ಲಿ ದೀರ್ಘಕಾಲ ಇಡಲ್ಪಟ್ಟಿರುವರು. ಇತ್ತೀಚೆಗೆ ಮಹಾತ್ಮ ಗಾಂಧಿಯವರ ಮುಂದಾಳುತನದಲ್ಲಿ ಕಾಂಗ್ರೆಸು ಸಂಸ್ಥೆಯು ನಡೆಸಿದ ಇತಿಹಾಸ ಪ್ರಸಿದ್ಧವಾದ ಸವಿನಯ ಕಾಯಿದೆಭಂಗ ಚಳವಳದಲ್ಲಂತೂ ಸಾವಿರಗಟ್ಟಿ ಜನರು ಸುಶಿಕ್ಷಿತರು ಐಶ್ವರ್ಯವಂತರು, ನೀತಿವಂತರು, ಮಹಿಳೆಯರು ಮತ್ತು ಮುಪ್ಪಿನೇಯರು—ನಿರ್ಭೀತಿಯಿಂದ ಸೆರೆಮನೆಯೊಳಗೆ ನುಗ್ಗಿದ್ದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಒಂಗಾಳದಂಥಾ ಮುಂದುವರಿದ ಪ್ರಾಂತ್ಯದಲ್ಲಿ ರಾಜಕೀಯ ಹೋರಾಟದಲ್ಲಿ ಜನರು ಸುತೂರು ಮೂವತ್ತು ವರ್ಷಗಳಿಗಿಂತ ಮುಂಚಿತವಾಗಿಯೇ ಬಂಧನಕ್ಕೊಳಗಾಗುತ್ತಾ ಬಂದಿದ್ದಾರೆ. ನಮ್ಮ ಪುಟ್ಟ ಪ್ರಾಂತ್ಯದಲ್ಲಾದರೋ 1930 ನೇ ಇಸವಿಯ ವರೆಗೆ ರಾಜಕೀಯ ಕೈದಿಗಳೇ ಇರಲಿಲ್ಲ. ಸತ್ಯಾಗ್ರಹ ಚಳವಳದ ನಂತರ ರಾಜಕೀಯ ಬಂದಿಗಳಾಗಿದ್ದವರು ಇಲ್ಲದ ಜಿಲ್ಲೆಯೇ ಇಲ್ಲವೆಂದರೆ ಅತಿಶಯೋಕ್ತಿಯೂಗಲಾರದು.

ರಾಜಕೀಯ ಕೈದಿಗಳಿಗೂ ಸಮಾಜಕ್ಕೆ ಹಾನಿಕರವಾದ ತಕ್ಸೀರುಗಳನ್ನು ಮಾಡಿದ ಸಾಧಾರಣದ ಕೈದಿಗಳಿಗೂ ತುಂಬಾ ವ್ಯತ್ಯಾಸವಿದೆ ರಾಜಕೀಯ ಒಂದಿಯಾದರೋ ಉಚ್ಚಧ್ಯೇಯವಾದ ತನ್ನ ದೇಶದ ಸ್ವಾತಂತ್ರ್ಯಕ್ಕಾಗಿ ತನ್ನ ಸ್ವಾರ್ಥತೆಯನ್ನು ಬಿಟ್ಟು, ಆಳರಸರ ದಬ್ಬಾಳಿಕೆಗೆ ತುತ್ತಾಗಿ ದೃಢನಿಶ್ಚಯದಿಂದ ಕಷ್ಟ ನಷ್ಟಗಳನ್ನು ಅನುಭವಿಸುವವನು. ಸಾಧಾರಣದ ಕೈದಿಯಾದರೋ ಘೋರಕಂವಾದ ಕೊಲೆ, ದರೋಡೆ, ವಿಶ್ವಾಸ ಘಾತಕ ಮೊದಲಾದ ಮಹಾಪರಾಧಗಳನ್ನು ಸ್ವಾರ್ಥಕ್ಕಾಗಿ ಮಾಡಿದವನು. ಇವರಿಬ್ಬರನ್ನೂ ಒಂದಿಖಾನೆಯಲ್ಲಿ ಒಂದೇ ರೀತಿ ಎಣಿಸುವುದು ಎಂದೂ ನ್ಯಾಯವಲ್ಲ.

ಸರ್ಕಾರದವರ ಈ ರೀತಿಯ ವರ್ತನೆಯನ್ನು ಸಹಿಸಲಾರದೆ ಕೆಲವು ವರ್ಷಗಳ ಹಿಂದೆ ಶ್ರೀಯುತ ಜತೀಂದ್ರದಾಸ್‌ರವರು ಕಾರಾಗೃಹದಲ್ಲಿ ದೀರ್ಘಕಾಲ ಉಪವಾಸವನ್ನು ಕೈಕೊಂಡು ಜೀವವನ್ನು ಅಂತ್ಯಗೊಳಿಸಿದ ವಿಷಯವು ಹಲವರಿಗೆ ಮರೆತು ಹೋಗಿರುವುದಿಲ್ಲ. ಅವರ ಜೀವಾರ್ಪಣೆಯ ಫಲಿತಾಂಶವಾಗಿ ಸರ್ಕಾರದವರು ಜೈಲು ಜೀವನದ ಕ್ರಮದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿದರು. ಅದರಂತೆ ಕೈದಿಗಳನ್ನು ಅವರ ಜೀವನದ ತುಗತಿ, ವಿದ್ಯೆ, ಸಂಸ್ಕೃತಿ ಮುಂತಾದವುಗಳನ್ನನುಸರಿಸಿ ಎ, ಬಿ, ಸಿ ವರ್ಗಗಳಾಗಿ ವಿಂಗಡಿಸಲುಪಕ್ರಮಿಸಿದರು. ಆದರೆ ಕಳೆದ ಶಾಸನಭಂಗ ಚಳವಳದಲ್ಲಿ ಈ ಸುಧಾರಣೆಯನ್ನು ಜಾರಿಗೆ ತರುವುದರ ಒಡಲು ಹಲವು ಸತ್ಯಾಗ್ರಹಿಗಳನ್ನು 'ಸಿ' ತರಗತಿಗೆ ಹಾಕಿದ್ದರಿಂದ ಅವರು ಪಟ್ಟಂಥಾ ಕಷ್ಟಗಳು ಗುಟ್ಟಿನ ಸಂಗತಿಯೇನೂ ತಿಲ್ಲ. ಆಗ್ಯೆ ಈ ವಿಚಾರವಾಗಿ ಸ್ವಲ್ಪ ಮಟ್ಟಿಗೆ ಚಳವಳವೂ ಎದ್ದಿತ್ತು.

ಆದರೆ ಸವಿನಯ ಕಾಯಿದೆ ಭಂಗ ಚಳವಳವು ನಿಲ್ಲಿಸಲ್ಪಟ್ಟಂದಿನಿಂದೀಚೆಗೆ ಸೆರೆ ಮನೆಯಲ್ಲಿ ರಾಜಕೀಯ ಬಂಧಿಗಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದಿದೆ. ಆದರೂ ಕೂಡ ಜೈಲಿನಲ್ಲಿರುವ ಕೆಲವು ರಾಜಕೀಯ ಕೈದಿಗಳನ್ನು ಯೋಗ್ಯ ರೀತಿಯಲ್ಲಿ ಕಾಣುವುದಿಲ್ಲವೆಂಬ ಪುಕಾರು ಆಗಾಗ್ಯೆ ಕೇಳಿ ಬರುತ್ತಿದೆ. ಇಂಥಾ ಅಯೋಗ್ಯ ವರ್ತನೆಯನ್ನು ಸಹಿಸಲಾರದೆ ಅದನ್ನು ನಿವಾರಿಸಲಿಕ್ಕಾಗಿ 'ಶಾಕೋರಿ ಒಳಸಂಚಿ'ನ ಕೇಸಿನ ಕೈದಿಯೂದ ಶ್ರೀ ಜೋಗೀಶ ಚಟರ್ಜಿಯವರು ಉಪವಾಸ ವ್ರತವನ್ನು ಕೈಕೊಂಡು ಮೃತ್ಯು ಮುಖದಲ್ಲಿರುವರು. ಅವರ ಕೋರಿಕೆಗಳನ್ನು ಸರ್ಕಾರದವರು ನೆರವೇರಿಸಿದ ಹೊರತು ಅವರು ಆಹಾರವನ್ನು ತೆಗೆದುಕೊಳ್ಳುವಂತಿಲ್ಲ. ಇದು ಅವರ ಸ್ವಾರ್ಥ ಲಾಭದ ವೃತವಲ್ಲ. ರಾಜಕೀಯ ಕೈದಿಗಳ ಸ್ಥಿತಿಯನ್ನು ಉತ್ತಮಗೊಳಿಸಲಿಕ್ಕಾಗಿಯೇ ಅವರು ಪ್ರಾಣವನ್ನಾದ್ರೂ ಕಳಕೊಳ್ಳಲು ಸಿದ್ಧರಿರುವದಾಗಿದೆ. ಇವರ ಸ್ಥಿತಿಯ ಕಡೆಗೆ ಎಲ್ಲರ ಸಹಾನುಭೂತಿಯು ಹರಿಯುವುದು ಅತ್ಯವಶ್ಯವಾಗಿದೆ.

ಈ ಮನ ಕರಗುವಂಥ ಪರಿಸ್ಥಿತಿಯನ್ನು ನೋಡಿ ಕಾಂಗ್ರೆಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಜನರ ಪ್ರತಿನಿಧಿಗಳಲ್ಲಿ ಒಂದು ಕೋರಿಕೆಯನ್ನು ಮಾಡಿರುವರು. ರಾಜಕೀಯ ಕೈದಿಗಳ ಸ್ಥಿತಿಯನ್ನು ಉತ್ತಮ ಗೊಳಿಸಲು ಎಡೆ ಬಿಡದೆ ಪ್ರಯತ್ನಿಸುವ ಕಮಿಟಿಗಳನ್ನು ಶಾಸನ ಸಭೆಗಳಲ್ಲಿ ನಿರ್ಮಿಸಬೇಕೆಂಬ ಅವರ ಸೂಚನೆಗೆ ಹಲವರ ಪ್ರೋತ್ಸಾಹವು ದೊರೆಯುತ್ತಿದೆ. ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯವು ದೊರೆಯುವ ವರೆಗೆ ರಾಜಕೀಯ ಖೈದಿಗಳು ಹೆಚ್ಚುತ್ತಲೇ ಇರುವರು. ಅದುದರಿಂದ ಅವರ ಜೈಲು ಜೀವನವು ಶಕ್ಯ ಮಟ್ಟಿಗಾದರೂ ಯೋಗ್ಯ ರೀತಿಯದ್ದಾಗಿರುವಂತೆ ಸೂಡಲು ದೇಶದ ಉದ್ದಗಲಕ್ಕೂ ಚಳವಳವನ್ನು ನಡೆಸಿ, ಜನರ ಅಭಿಪ್ರಾಯದ ಬಲದಿಂದ ಸರ್ಕಾರದವರ ಈಗಿನ ವರ್ತನೆಯನ್ನು ಬದಲಾಯಿಸುವಂತೆ ಮಾಡುವುದು ಅತ್ಯಾಗತ್ಯವಾಗಿದೆ.

ಜವಿೂನ್ದಾರರ ಸಂಘದ ಆಶ್ರಯದಲ್ಲಿ
ಸಾರ್ವಜನಿಕ ಸಭೆಗಳು.

ಕಂದಾಯ ಮೂಫಿ. ಭೂಮಿ ಗಿರ್ವಿ ಬ್ಯಾಂಕು ಮತ್ತು ರಾಜಕ್ತೀಯ ಸುಧಾರಣೆ—ಈ ಮೂರು ವಿಷಯಗಳನ್ನು ಚರ್ಚಿಸಲು ಕೊಡಗು ಜವಿೂನ್ದಾರರ ಸಂಘದ ಆಶ್ರಯದಲ್ಲಿ ಈ ಕೆಳಗಿನ ಸ್ಥಳಗಳಲ್ಲಿ ಸಾರ್ವಜನಿಕ ವಿೂಟಿಂಗುಗಳು ನಡಿಸಲ್ಪಟ್ಟವು. ಈ ವಿೂಟಿಂಗುಗಳಲ್ಲಿ ಪಾಸಾದ ತರಾವುಗಳ ಪ್ರತಿಯು ಆಯಾಯ ವಿೂಟಿಂಗಿನ ಅಧ್ಯಕ್ಷರಿಂದ ಕಮಿಷನರವರಿಗೆ ಕಳುಹಿಸಲ್ಪಟ್ಟಿದೆ.

ಹುದಿಕೇರಿ.

1. ಇದೇ ಫೆಬ್ರವರಿ ತಾ. 10 ನೇ ಸೋಮವಾರ ಮಧ್ಯಾಹ್ನದ ಮೇಲೆ ಹುದಿಕೇರಿ ಸಂತೆಮೊಳದ ಬಳಿ ಒಂದು ಸಾರ್ವಜನಿಕ ಸಭೆ ಕೂಡಿತು. ಮ. ರಾ. ಅಜ್ಜಿಕುಟ್ಟಿರ ಸುಬ್ಬಯ್ಯನವರು ಅಧ್ಯಕ್ಷರಾದವಿಗೆ ಆರಿಸಲ್ಪಟ್ಟರು. ಜವಿೂನ್ದಾರರ ಸಂಘದ ಉಪಾಧ್ಯಕ್ಷರಾದ ಮೆ. ಕೊಳ್ಳಿಮಾಡ ಕರುಂಬಯ್ಯನವರು ಭೂಮಿ ಗಿರ್ವಿ ಬ್ಯಾಂಕಿನ ಲಾಭ ನಷ್ಟಗಳನ್ನು ಕುರಿತು ಭಾಷಣ ಮಾಡಿ ಈ ಕೆಳಗಿನ ಗೊತ್ತುವಳಿಯನ್ನು ಸಭೆಯ ಮುಂದಿಟ್ಟರು'

'ಕೊಡಗಿನಲ್ಲಿ ಭೂಮಿ ಗಿರ್ವಿ ಬ್ಯಾಂಕನ್ನು ಪ್ರತ್ಯೇಕವಾಗಿ ಸ್ಥಾಪಿಸುವದರ ಬದಲು ದೀರ್ಘ ಕಂತಿನ ಸಾಲ ಕೊಡುವ ಏರ್ಪಾಡನ್ನು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲೇ ಮಾಡುವುದು ಉತ್ತಮವೆಂದು ಈ ಸಭೆಯ ಅಭಿಪ್ರಾಯವಾಗಿದೆ.' ಮೆ. ಗಳಾದ ಚೇಂದಿರ ತಮ್ಮಯ್ಯನವರು ಮತ್ತು ಪಿ. ಜಿ. ಮುದ್ದಮ್ಮಯ್ಯನವರು ತರಾವಿಗೆ ಒತ್ತಾಸೆಯೊಗಿ ವಾತಾಡಿದರು. ತರಾವು ಸರ್ವಸಮ್ಮತದಿಂದ ಪಾಸಾಯಿತು.

2. 'ಈ ವರ್ಷದ ಬೆಳೆ ಫಸಲು ಉತ್ತಮವಾಗಿಲ್ಲದ್ದರಿಂದಲೂ, ಬೆಲೆಯು ಕಡಿಮೆಯಾಗಿರುವುದರಿಂದಲೂ ಈ ಸಾಲಿಯ ಕಂದಾಯದಲ್ಲಿ ಮೂರರಲ್ಲಿ ಒಂದು ಭಾಗವನ್ನು ಮೂಫಿ ಬಿಡಬೇಕೆಂದೂ, ಕಳೆದ ಎಂಡು ವರ್ಷಗಳಲ್ಲಿ ತೋರಿಸಿದ ತಾತ್ಕಾಲಿಕ ಕಂದಾಯ ರಿಯಾಯಿತಿಯನ್ನು ಖಾಯಂ ಮೂಫೀ ಮಾಡಬೇಕೆಂದೂ ಈ ಸಭೆಯವರ ಕೋರಿಕೆಯಾಗಿದೆ.' ಎಂಬ ತರಾವನ್ನು ಮೆ. ಅಜ್ಜಮಾಡ ಮೊದಪ್ಪನವರು ಸೂಚಿಸಿ ಕೆಲವು ಮಾತುಗಳನ್ನಾಡಿದ ಮೇಲೆ ಅದು ಏಕೋಭಾವದಿಂದ ಮುಂಜೂರಾಯಿತು

3. 'ಕೊಡಗಿಗೆ ರಾಜಕೀಯ ಸುಧಾರಣೆಗಳನ್ನೇನೂ ಕೊಡಲು ಏರ್ಪಾಡು ಮಾಡದಿರುವುದು ತುಂಬಾ ಅತೃಪ್ತಿಕರ ಮತ್ತು ಖಿನ್ನಮನಸ್ಕತಾಕರ. ಆದುದರಿಂದ ಪೂರ್ಣ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಕೊಡಲು ಕೂಡಲೇ ಏರ್ಪಾಡು ಮಾಡತಕ್ಕದ್ದು' ಎಂಬ ಗೊತ್ತುವಳಿಯನ್ನು ಸಭೆಯ ಮುಂದಿಟ್ಟ ಮೆ. ಕೆ. ಸಿ. ಕರುಂಬಯ್ಯನವರು ಸುಧಾರಣೆಯ ವಿಷಯದಲ್ಲಿ ಸರ್ಕಾರದವರ ವರ್ತನೆಯನ್ನು ಖಂಡಿಸಿ ಮಾತಾಡಿದರು. ತರಾವು ಯಾರ ವಿರೋಧವೂ ಇಲ್ಲದೆ ಪಾಸಾಯಿತು.

ಕಳ್ಳಿರಬಾಣೆ ವಿೂಟಿಂಗು.

1. ಈ ತಾ. 10 ನೇ ಸೋಮವಾರ ಮಧ್ಯಾಹ್ನದ ಮೇಲೆ ನಾಲ್ಕು ಗಂಟೆಗೆ ಅಮ್ಮತ್ತಿನಾಡಿನವರ ಸಭೆಯೊಂದು ಕಳ್ಳಿರಬಾಣೆ ಕೋಲು ಮುಂದಿನಲ್ಲಿ ನೆರೆದಿತ್ತು. ಮೆ. ಏನಂಡ.ಕಾರ್ಯಪ್ಪನವರು ಅಧ್ಯಕ್ಷರಾಗಿದ್ದರು ಜವಿೂನ್ದಾರರ ಸಂಘದ ಅಧ್ಯಕ್ಷರಾದ ಮ. ರಾ. ಪಿ. ಐ ಬೆಳ್ಯಪ್ಪನವರು ವಿೂಟಿಂಗಿನ ಉದ್ದಿಶ್ಯವನ್ನು ಸೂಕ್ಷ್ಮವಾಗಿ ತಿಳಿಸಿ, ಹೊಸ ವಿಷಯವಾದ ಭೂಮಿ ಗಿರ್ವಿ ಬ್ಯಾಂಕಿನ ಪ್ರಯೋಜನಗಳನ್ನೂ, ಅದಕ್ಕಿಂತಲೂ ಹೆಚ್ಚಾದ ದೋಷಗಳನ್ನೂ ಕುರಿತು ವಿವರವಾಗಿ ಭಾಷಣ ಮಾಡಿದರು. ಪ್ರತ್ಯೇಕ ಭೂಮಿ ಅಡಮಾನದ ಬ್ಯಾಂಕಿನ ಸ್ಥಾಪನೆಯನ್ನು ವಿರೋಧಿಸಿ ಮೆ. ಗಳಾದ ಮಂಡೆಯಡ ಬೆಳ್ಯಪ್ಪನವರು, ಕುಟ್ಟಪ್ಪನವರು, ಮೂದಪಂಡ ಸುಬ್ಬಯ್ಯನವರು ಮತ್ತು ಮಂಡೆಯಡ ಮೊಣಪ್ಪನವರು ಮಾತಾಡಿದರು. ಮೆ. ಮಾಚಿಮಂಡ ನಂಜುಂಡನವರು ಕೆಲವು ಪ್ರಶ್ನೆಗಳನ್ನು ಕೇಳಿದಕ್ಕೆ ಮೆ. ಪಿ ಬೆಳ್ಯಪ್ಪನವರು ಜವಾಬನ್ನು ಕೊಟ್ಟರು. ನಂತರ ಬ್ಯಾಂಕನ್ನು ಕುರಿತ ತರಾವು ಮೇಲೆ ತೋರಿಸಿದ ರೂಪದಲ್ಲಿ ಸರ್ವಸಮ್ಮತದಿಂದ ಮುಂಜೂರಾಯಿತು.

2 ಆ ಮೇಲೆ ಕಂದಾಯ ಮೂಫಿಯ ತರಾವನ್ನು ಮೇಲ್ಕಾಣಿಸಿದಂತೆ ಶ್ರೀ. ಪಿ. ಬೆಳ್ಯಪ್ಪನವರು ಸಭೆಯ ಮುಂದಿಟ್ಟರು. ಕಂದಾಯದ ಅರ್ಧದಷ್ಟು, ಹಾಗೆಯೇ ಡಿಸ್ಟ್ರಿಕ್ಟ್ ಬೋರ್ಡು ಸೆಸ್ಸಿನ ಅರ್ಧವೂ ಮೂಫಿ ಮಾಡಲ್ಪಡಬೇಕೆಂದು ಮೆ. ಐ ಪಿ. ಮೂದಪ್ಪನವರು ಸೂಚಿಸಿದರು. ಡಿಸ್ಟ್ರಿಕ್ಟ್ ಬೋರ್ಡು ಸೆಸ್ಸಿನ್ನು ವಿನಾಯಿಸಬೇಕೆಂದು ಅಧ್ಯಕ್ಷರೂ, ಮೆ. ಪಿ ಬೆಳ್ಯಪ್ಪನವರೂ ವಿವರಿಸಿದ ಮೇಲೆ ಈ ಸಂಬಂಧದ ತರಾವು ವಿರೋಧವಿಲ್ಲದೆ ಮುಂಜೂರಾಯಿತು.

3. ಸರ್ಕಾರ ಆಡಳಿತೆಯ ಸುಧಾರಣೆಗಳನ್ನು ಕುರಿತ ತರಾವನ್ನು ಜವಿೂನ್ದಾರರ ಸಂಘದ ಅಧ್ಯಕ್ಷರು ವಿಂಗಡಿಸಿ ಮುಂದಿಟ್ಟು ಒಂದು ಚಿಕ್ಕ ಭಾಷಣ ಮಾಡಿದರು. ಈ ವಿಷಯ ಹುದಿಕೇರಿಕೆ ವಿೂಟಿಂಗನಲ್ಲಿ ಪಾಸಾದಂಥಾ ತರಾವೇ ಇಲ್ಲಿಯೂ ಸರ್ವಸಮ್ಮತದಿಂದ ಮುಂಜೂರಾಯಿತು. ಅಧ್ಯಕ್ಷರು ಸಭಿಕರನ್ನು ವಂದಿಸಿದ ನಂತರ ಸಭೆಯು ಮುಕ್ತಾಯವಾಯಿತು.

ಅಮ್ಮತ್ತಿ.

1. ಈ ಫೆಬ್ರವರಿ ತಾ. 11 ನೇ ಮಂಗಳವಾರ ಅಮ್ಮತ್ತಿ ಪೇಟೆಯ ಬಳಿ ವೈದಾನದಲ್ಲಿ ಮೆ. ನೆಲ್ಲಮಕ್ಕಳ ಅಚ್ಚಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಪಬ್ಲಿಕ್ ವಿೂಟಿಂಗು ನಡೆಯಿತು. ಮ. ರಾ. ಪಂಡ್ಯಂಡ ಬೆಳ್ಯಪ್ಪನವರು ಕೊಡಗಿನಲ್ಲಿ ಹೊಸದಾಗಿ ಸ್ಥಾಪಿಸಬೇಕೆಂದು ಆರ್ಥಿಕ ವಿಚಾರಣಾ ಕಮಿಟಿಯವರು ಸಿಫಾರಸು ಮಾಡಿರುವ ಭೂಮಿ ಅಡವಾನದ ಬ್ಯಾಂಕಿನ ಸಾಧಕ ಬಾಧಕಗಳನ್ನು ಕುರಿತು ದೀರ್ಘ ಭಾಷಣ ಮಾಡಿ ಇದನ್ನು ಕುರಿತ ತರಾವನ್ನು ಮೇಲ್ಕಾಣಿಸಿದ ರೀತಿ ಸಭೆಯ ಮುಂದಿಟ್ಟರು. ಮೆ. ಐ ಪಿ. ಮೂದಪ್ಪನವರು ಅನುಮೋದಿಸಿದ ಈ ತರಾವಿಗೆ ವಿರೋಧವಾಗಿ ಮೆ ಫುಳಿಯಂಡ ಮೂದಪ್ಪನವರು ಮಾತಾಡಿದರು. ಜವಿೂನ್ದಾರರ ಸಂಘದ ಸೆಕ್ರೆಟರಿಯೂದ ಮೆ. ಐ. ಪಿ. ಕಾರ್ಯಪ್ಪನವರು ತರಾವಿಗೆ ಒತ್ತಾಸೆಯನ್ನಿತ್ತಾ ಮೆ. ಪಿ. ಮೂದಪ್ಪನವರ ಭಾಷಣಕ್ಕೆ ಉತ್ತರವನ್ನಿತ್ತರು. ಭೂಮಿ ಗಿರ್ವಿ ಬ್ಯಾಂಕು ಸಾಗು ಹಿಡುವಳಿದಾರರಿಗೆ ಪ್ರಯೋಜನವಾಗುವದೆಂದು ಮೆ. ಅಬ್ದುಲ್ ಗಫೂರ್ ಖಾನರವರು ಮಾತಾಡಿದರು. ಮೆ ನೆಲ್ಲಮಕ್ಕಳ ದೇವಯ್ಯನವರು ಕೆಲವು ಪ್ರಶ್ನೆಗಳನ್ನು ಕೇಳಿದರು. ಪ್ರಶ್ನೆಗಳಿಗೂ, ಆಕ್ಷೇಪಣೆಗಳಿಗೂ ಮೆ. ಪಿ. ಬೆಳ್ಯಪ್ಪನವರು ಜವಾಬನ್ನಿತ್ತ ಮೇಲೆ ಗೊತ್ತುವಳಿಯು ಯಾರೊಬ್ಬರ ವಿರೋಧವಿಲ್ಲದೆ ಪಾಸಾಯಿತು.

2. ಬೇರೆ ವಿೂಟಿಂಗುಗಳಲ್ಲಿ ಆದಂತೆಯೇ ಶೇಕಡ 33⅓ ರಷ್ಟು ಕಂದಾಯ ಮೂಫಿ ಮಾಡಬೇಕೆಂಬ ತರಾವು ಏಕ ಮತದಿಂದ ಮುಂಜೂರಾಯಿತು.

3. ಕೆಲವು ಮಾತುಗಳಿಂದ ಮೆ. ಪಿ ಬೆಳ್ಯಪ್ಪನವರು ರಾಜಕೀಯ ಸುಧಾರಣೆಗಳನ್ನು ಕುರಿತ ಗೊತ್ತುವಳಿಯನ್ನು ಸೂಚಿಸಿದರು. ಇದನ್ನು ಶ್ರೀ ಅಬ್ದುಲ್ ಗಫೂರ್ ಖಾನರು ಅನುಮೋದಿಸಲಾಗಿ ಸರ್ವಸಮ್ಮತದಿಂದ ಪಾಸಾಯಿತು. ಜವಿೂನ್ದಾರರ ಸಂಘದ ಸೆಕ್ರೆಟರಿಯವರು ಸಭೆಯ ಅಧ್ಯಕ್ಷರನ್ನೂ, ನೆರೆದಿದ್ದ ಸಭಿಕರನ್ನೂ ವಂದಿಸಿದರು ವಿೂಟಿಂಗಿನ ಅಧ್ಯಕ್ಷರು ಜವಿೂನ್ದಾರರ ಸಂಘದ ಪ್ರೆಸಿಡೆಂಟರು ಮತ್ತು ಸೆಕ್ರೆಟರಿಯವರ ಶ್ರಮಕ್ಕೆ ಕೃತಜ್ಞತೆಯನ್ನು ಸೂಚಿಸಿದ ಮೇಲೆ ವಿೂಟಿಂಗು ಬರಕಾಸ್ತಾಯಿತು.

ವೀರಾಜಪೇಟೆ.

1. ಈ ತಾ. 12 ನೇ ಬುಧವಾರ ಮಧ್ಯಾಹ್ನ 1¾ ಗಂಟೆಗೆ ವೀರಾಜಪೇಟೆ ವಿಕ್ಟೋರಿಯಾ ಕ್ಲಬ್ಬಿನ ಎದುರುಗಡೆ ವೈದಾನದಲ್ಲಿ ಸಾರ್ವಜನಿಕ ಕೂಟವೊಂದು ಸೇರಿತ್ತು. ಮೆ. ಪಾಲೇಕಂಡ ಅಯ್ಯಪ್ಪನವರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು ಜವಿೂನ್ದಾರರ ಸಂಘದ ಪ್ರೆಸಿಡೆಂಟರು ವಿೂಟಿಂಗಿನ ಉದ್ದಿಶ್ಯವನ್ನು ವಿವರಿಸಿ, ಭೂಮಿ ಅಡವಾನದ ಬ್ಯಾಂಕಿನ ಲಾಭ ನಷ್ಟಗಳನ್ನೂ, ಅದು ಕೊಡಗಿನಲ್ಲಿ ಜಾರಿಪ್ರದವಾಗದಿರಲು ಕಾರಣಗಳನ್ನೂ ಕುರಿತು ವಿವರವಾಗಿ ಉಪನ್ಯಾಸಮಾಡಿದರು. ಮೆ. ಕೂತಂಡ ಮುತ್ತಣ್ಣನವರು ಕೆಲವು ಪ್ರಶ್ನೆಗಳನ್ನು ಕೇಳಿದಕ್ಕೆ ಮೆ. ಐ. ಪಿ. ಕಾರ್ಯಪ್ಪನವರು ಉತ್ತರವನ್ನಿತ್ತು ಗೊತ್ತುವಳಿಗೆ ಒತ್ತಾಸೆಕೊಟ್ಟರು. ಮೆ. ವಿದ್ದಂಡ ಬೋಪಯ್ಯನವರು ತರಾವನ್ನು ಸಮರ್ಥಿಸಿ ಮಾತಾಡಿದ ಮೇಲೆ ಅದನ್ನು ಮೇಲಿನ ರೂಪದಲ್ಲಿಯೇ ಸರ್ವಸಮ್ಮತದಿಂದ ಮುಂಜೂರಾಯಿತು.

2. ಈ ವರ್ಷ ಮೂರರಲ್ಲಿ ಒಂದು ಭಾಗ ಕಂದಾಯವನ್ನು ವಜ ಕೊಡಬೇಕೆಂಬ ಸೂಚನೆಯನ್ನು ಜವಿೂನ್ದಾರರ ಸಂಘದ ಕಾರ್ಯದರ್ಶಿಯವರು ಸಭೆಯ ಮುಂದಿಟ್ಟರು. ಇದು ಏಕೋಭಾವದಿಂದ ಪಾಸಾಯಿತು.

3. ಕೊಡಗಿಗೆ ಪೂರ್ತಿ ಜವಾಬ್ದಾರಿ ಸರ್ಕಾರವನ್ನು ಕೊಡುವ ಏರ್ಪಾಡು ಕೂಡಲೇ ಮಾಡಬೇಕೆಂಬ ಗೊತ್ತುವಳಿಯನ್ನು ಸೂಚಿಸಿ ಶ್ರೀ ಪಂಡ್ಯಂಡ ಬೆಳ್ಯಪ್ಪನವರು ಚಿಕ್ಕ ಭಾಷಣ ಮಾಡಿದ ಮೇಲೆ ತರಾವು ವಿರೋಧವಿಲ್ಲದೆ ಮುಂಜೂರಾಯಿತು. ವಿೂಟಿಂಗಿನ ಅಧ್ಯಕ್ಷರಿಗೂ, ಜವಿೂನ್ದಾರರ ಸಂಘದ ಪರಿಗೂ, ಸಭಿಕರಿಗೂ ವಂದನೆಗಳಿಂದ ಸಭೆಯು ಅಂತ್ಯವಾಯಿತು.

ವಿವಿಧ ವಾರ್ತಾವಳಿ.

ಕಾಂಗ್ರೆಸ್ಸನ್ನು ಅಹಮ್ಮದಾಬಾದಿಗೆ ಆಹ್ವಾನಿಸುವರು.

ಅಹಮ್ಮದಾಬಾದು ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಸರದಾರ ವಲ್ಲಭಭಾಯಿಯವರನ್ನು, ತಮ್ಮ ಕಮಿಟಿಗೆ ಅಧ್ಯಕ್ಷರನ್ನಾಗಿ ನೂಡಿ ಮುಂದಿನ ಕಾಂಗ್ರೆಸ್ಸನ್ನು ಅಹಮ್ಮದಾಬಾದಿಕ್ಕೆ ಕರೆಯಲು ಅವರಿಗೆ ಅಧಿಕಾರಕೊಟ್ಟಿದ್ದಾರೆ.

—೦೦೦—

ಧೂಳಿದ್ದರೇನೇ ಮಳೆ.

ಲೀಡ್ಸ್ ವಿಶ್ವವಿದ್ಯಾಲಯದ ಪ್ರೊಫೆಸರಾದ ಆಲ್ಬರ್ಟ್ ಗಿಲ್ಲಿಗನ್ನರು ಹೇಳಿರುವುದಿದು.

'ನೀರಿನ ಆವಿಯು ಒಂದುಗೂಡಿ ಮೋಡಗಳಾಗಲು ಪ್ರತಿಯೊಂದು ಹನಿಗೂ ಕೇಂದ್ರವಾಗಿ ಧೂಳಿನ ಅಣುವೊಂದು ಬೇಕು. ಅದಿಲ್ಲದಿದ್ದಲ್ಲಿ ಮಳೆಯೂಗುವುದು ಅಸಾಧ್ಯ. ಆದುದರಿಂದ ಧೂಳು, ಹೊಗೆ ಇವೆಲ್ಲವೂ ಸಮುದ್ರದಂತೆಯೇ ಮಳೆಗೆ ಆಧಾರ.'

ಅಂತೂ ಧೂಳಿಗೂ ಒಂದು ಉಪಯೋಗವಿದೆ ಎಂದಾಯಿತು.

—೦೦೦—

ನೀರಿನಲ್ಲಿ ತೇಲುವ ವಿಚಿತ್ರ ಕಲ್ಲು!

ನಾಗಪುರದ ಸೆಂಟ್ರಲ್ ಮ್ಯೂಸಿಯಮ್ಮಿಗೆ ಹೊಸದಾಗಿ ಒಂದು ಕಲ್ಲನ್ನು ತಂದಿರಿಸಿದ್ದಾರೆ. ಇದನ್ನು ನೀರಿನಲ್ಲಿ ಬಿಟ್ಟರೆ ಮುಳುಗುವುದಿಲ್ಲ. ತೇಲುವುದು!

ಇದೊಂದು ಹಳೆಯು ಮುರಕು ಮನೆಯಲ್ಲಿ ಬಿದ್ದಿತ್ತಂತೆ. ವರ್ಣವು ಕೆಂಪು ಮತ್ತು ಕಪ್ಪು ಮಿಶ್ರವಿದ್ದಂತಿದೆ. ದೊಡ್ಡ ಜಮ್ಮಿಟ್ಟಿಗೆಯಂತಿದ್ದು ಇಟ್ಟಿಗೆಯ ಆಕಾರದಲ್ಲಿದೆ.

ಶಾಸ್ತ್ರಜ್ಞರು ಇದು 'ಪ್ಯೂಮಿಸ್' ಜಾತಿಯ ಶಿಲೆ ಎಂದು ಊಹಿಸಿರುವರು.

—೦೦೦—

ಷಾಂಘೈನಲ್ಲಿ ಷೋಕೀ ಕೂಡದು.

ಷಾಂಘೈ ಮುನ್ಸಿಪಾಲಿಟಿಯವರು ಒಂದು ಹೊಸ ಕಾನೂನನ್ನು ಜಾರಿಗೆ ತಂದಿದ್ದಾರೆ.

ಇನ್ನು ಮೇಲೆ ಪುರಜನರು 'ಷೋಕೀ' ಬಟ್ಟೆಗಳನ್ನು ಧರಿಸಕೂಡದಂತೆ ಜನರಿಗೆ ಅನುಕೂಲವಾಗಿಯೂ, ಅಸಹ್ಯವಲ್ಲದೂದೂ ಆದ ಬಟ್ಟೆಗಳನ್ನೂ ಮಾತ್ರ ಹಾಕಿಕೊಳ್ಳಬೇಕಂತೆ.

ಹೋದ ವಾರ ಪೊಲೀಸರು ಅನೇಕ ದರ್ಜಿಯರ ಅಂಗಡಿಗಳಿಗೆ ಹೋಗಿ 'ಷೋಕೀ' ಬಟ್ಟೆಗಳೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು ಹೋದರಂತೆ.

—೦೦೦—

ಗಂಡಿಲ್ಲದ ಮದುವೆ.

ಈ ಕಾಲದಲ್ಲಿ ಕೇಳರಿಯದ ವಿಚಿತ್ರ ಮದುವೆಯೊಂದು ಟ್ರಿಜೂರಿನ ಹತ್ತಿರಿನ ಅಯಂತೆ ಎಂಬ ಹಳ್ಳಿಯಲ್ಲಾಯಿತು. ಮದುವೆಗೆ ಹುಡುಗಿಯೊಬ್ಬಳಿದ್ದಳು, ವರನಿರಲಿಲ್ಲ.

ವರನು ಸಿಂಗಪುರದಲ್ಲಿದ್ದಾನೆ. ಮದುವೆಯ ದಿನ ಆ ಊರಿನ ದೊಡ್ಡ ಮನುಷ್ಯರೆಲ್ಲ ಸೇರಿದರು; ಅವನ ಫೋಟೋವನ್ನು ಶರಸಿ ಅದನ್ನು ಪೀಠದ ಮೇಲೆ ಇಟ್ಟು ಅದಕ್ಕೂ ಹುಡುಗಿಗೂ ಮದುವೆ ಮಾಡಿದರು.

ಇನ್ನು ಕೆಲವು ದಿನಗಳಲ್ಲಿಯೇ ಹುಡುಗಿಯು ಸಿಂಗಪುರಕ್ಕೆ ಗಂಡನ ಮನೆಗೆ ಹೋಗುವಳು. ತನ್ನ ಗೈರುಹಾಜರಿನಲ್ಲಿ ಮದುವೆಯು ಈ ರೀತಿ ನಡೆಯಬೇಕೆಂದು ಗಂಡನೇ ಬರೆದಿದ್ದನಂತೆ.

—೦೦೦—

ಯುದ್ಧದ ತಯ್ಯಾರಿ ಹೀಗಿದೆ!

ಜೆಕೋಸ್ಲೋವಕೀಯದ ಗಡಿನಾಡಿನ ಹತ್ತಿರ ಜರ್ಮನಿಯವರು ಭೂಮಿಯ ಒಳಗೆ ಲಕ್ಕವಿಲ್ಲದಷ್ಟು ಇಲಗಳನ್ನು ಸಾಕಿದ್ದಾರೆ. ಅವುಗಳ ಸಂಖ್ಯೆಯೂ ಇನ್ನೂ ಬೆಳೆಯುತ್ತಲೇ ಇದೆ. ಯುದ್ಧವೇನಾದರೂ ಆರಂಭವಾದರೆ ಈ ಇಲಗಳಿಗೆ ಪ್ಲೇಗ್ ಬಾಸಿಲಿ (ಕೀಟಾಣು)ಗಳ ಇಂಜಕ್ಷನ್ ಕೊಟ್ಟು ಶತ್ರು ರಾಷ್ಟ್ರಗಳಿಗೆ ಒಡಿಸಿಬಿಡುವುದಕ್ಕಾಗಿ ಈ ಏರ್ಪಾಡಂತೆ.

—೫೦೫—

ಇದೇನು ಯುದ್ಧದ ಪೀಠಿಕೆಯೇ?

ಮಂಚುಕೋ ರಾಜ್ಯದಲ್ಲಿ ಏನೋ ಗುಪ್ತ ಸಂಗತಿಗಳು ನಡೆಯುತ್ತಿವೆ. ಅದರ ಪೂರ್ವಭಾಗದಲ್ಲಿ ಜಪಾನಿ ಸೈನಿಕರಿಗೂ, ಮಂಚುಕುವೋ ಸೈನಿಕರಿಗೂ ಹೋರಾಟವಾಯಿತಂತೆ. ಎಂಡು ಕಡೆಗಳಲ್ಲಿಯೂ ಅನೇಕ ಜನರು ಸತ್ತರು. ಇದರ ಹಿಂದೆ ರಷ್ಯದೇಶದವರು ಕೈ ಕೆಲಸ ಮಾಡುತ್ತಿದೆಯೆಂದು ಜಪಾನಿಗಳ ಹೇಳಿಕೆ. ಮುಂದೆ ಸಂಭವಿಸಬಹುದಾದ ರಷ್ಯ-ಜಪಾನುಗಳ ಯುದ್ಧದ ಪೀಠಿಕೆಯೇ ಇದು?

—೦೦೦—

ಮಹಾತ್ಮರ ಹಿರಿಯ ಮಗನು ಕ್ರಿಶ್ಚಿಯನ್ನಾಗುವನು.

ಮಹಾತ್ಮ ಗಾಂಧಿಯವರ ಹಿರಿಯ ಮಗನಾದ ಹರಾಲಾಲ್ ಗಾಂಧಿಯು 'ಡೇಲಿ ನ್ಯೂಸ್' ಪತ್ರಕ್ಕೆ ಪತ್ರ ಬರೆದು ತಾನು ಕ್ರಿಶ್ಚಿಯನ್ನನಾಗಲು ನಿರ್ಧರಿಸಿರುವದಾಗಿ ಜಾಹೀರು ಮಾಡಿದ್ದಾರೆ. ಇದರ ವಿಷಯ ಹೆಚ್ಚಿನ ವಿವರಗಳು ತಿಳಿದಿಲ್ಲ.

—೦೦೦—

ಕ್ರಿಕೆಟ್ ಟೆಸ್ಟ್ ಮ್ಯಾಚಿನಲ್ಲಿ ಆಸ್ಟ್ರೇಲಿಯನರ ಪರಾಭವ

ಮದ್ರಾಸಿನಲ್ಲಿ ತಾ. 4ರಲ್ಲಿ ಆಸ್ಟ್ರೇಲಿಯನರಿಗೂ; ಭಾರತೀಯರಿಗೂ ಕೂನೆಯದಾದ ನಾಲ್ಕನೇ ಟೆಸ್ಟ್, ಮ್ಯಾಚ್ ನಡೆದಿತ್ತು. ಆಸ್ಟ್ರೇಲಿಯನರು ಎರಡನೇ ಇನಿಂಗ್ಸಿನಲ್ಲಿ ಎಲ್ಲ 107 ಓಟಗಳಿಗೆ ಔಟ್ ಆದರು. ಹೀಗಾಗಿ ಹಿಂದೀ ಜನರು 33 ಓಟಗಳಿಂದ ವಿಜಯವನ್ನು ಸಂಪಾದಿಸಿದರು.

—೦೦೦—

ಜೋಗೇಶ್ ಚಟರ್ಜಿಯವರ ಪ್ರಾಣತ್ಯಾಗದ ನಿರ್ಧಾರ.

ಅಖಿಲದತ್ತರಿಗೆ ತಂತಿ.

ಲಕ್ನೋ ಸೆಂಟ್ರಲ್ ಜೈಲಿನಲ್ಲಿ ಅನ್ನತ್ಯಾಗ ಕೈಕೊಂಡಿರುವ ಜೋಗೇಶ ಚಟರ್ಜಿಯವರು ಅಖಿಲ ಚಂದ್ರದತ್ತರ ತಂತಿಗೆ ಉತ್ತರ ರೂಪವಾಗಿ, ತಮ್ಮ ಬೇಡಿಕೆಗಳು ಪೂರ್ಣವಾಗದೆ ನಾವು ಅನ್ನತ್ಯಾಗ ನಿಲ್ಲಿಸುವದಿಲ್ಲವಾಗಿ ತಿಳಿಸಿರುವರೆಂದು ಗೊತ್ತಾಗುತ್ತದೆ. ಜೋಗೇಶರು ಈಗ ಬಹಳ ಅಶಕ್ತರಾಗಿರುವರು.

—೦೦೦—

ಲಾಹೋರು ಸತ್ಯಾಗ್ರಹ

ಲಾಹೋರು ಶಾಹಿದ್‌ಗಂಜ್ ಮಸೀದಿಯ ವಿವಾದದ ಬಗ್ಗೆ ಮಹಮ್ಮದೀಯರು ಸತ್ಯಾಗ್ರಹವನ್ನು ಹೂಡಿರುವಂಶ್ಟೆ. ಅವರು ಮೊದಲನೇ ಮತ್ತು ಎರಡನೇ ಸರ್ವಾಧಿಕಾರಿಗಳಾದ (ಡಿಕ್ಟೇಟರುಗಳು) ಮುಸೊಲಿನಿ ಮತ್ತು ಯೂಸುಬುಲ್ ಹುಸ್ಸೇನ್ ಎಂಬವರು ಬಾದಶಾಹೀ ಮಸೀದಿಯೊಳಗಿರುವರು. ಪೊಲೀಸರು ಆ ಮಸೀದಿಯ ದ್ವಾರದಲ್ಲಿ ಅವರನ್ನು ದಸ್ತಗಿರಿ ಮಾಡಲೋಸುಗ ಕಾಯುತ್ತಿರುವರು.

—೦೦೦—

ಧನದ ಬದಲು ಧಾನ್ಯ.

ಕಾಂಗ್ರೆಸ್ಸಿನ ಸದಸ್ಯರಾಗಲು ಈಗಿರುವ ನಿಬಂಧನೆಗಳ ಪ್ರಕಾರ ವರ್ಷಕ್ಕೆ ನಾಲ್ಕಾಣೆ ಫೀಯನ್ನು ಕೊಡಬೇಕು.

ಪಂಜಾಬಿನ ಕಾಂಗ್ರೆಸ್ ಕಮಿಟಿಯವರು ನಾಲ್ಕಾಣೆಯ ಹಣದ ಬದಲು ಧಾನ್ಯವನ್ನೇ ತೆಗೆದುಕೊಳ್ಳ ತಕ್ಕದ್ದೆಂದು ಸೂಚಿಸಿರುವರು. ಇದರಿಂದ ಹಳ್ಳಿಗರಿಗೆ ಅನುಕೂಲಿಸುವುದಂತೆ.

—೦೦೦—

ಪುತ್ರ ಸಂಪತ್ತು ಎಷ್ಟಾಗುವದು?

ಟೂಟಿಂಗ್ ಎಂಬಲ್ಲಿ ನೂರು ವರ್ಷಗಳ ಹಿಂದೆ ಸಾರಾ ಏನ್ ಎಂಬಾಕೆ ಇದ್ದಳು. 23 ವರ್ಷಗಳಲ್ಲಿ 25 ಮಕ್ಕಳನ್ನು ಪಡೆದಳು. 15 ನೆಯ ಶತಮಾನದಲ್ಲಿ ಎಸೆಸ್ ಲಿಂಗ್ ಎಂಬ ಜರ್ಮನ್ ಮಹಿಳೆ 53 ಮಕ್ಕಳ ತಾಯಿಯಾಗಿದ್ದಳು. ಭರತ್ ಡ್ ಸೈಮನ್ ಬರ್ಗ್ ಎಂಬಾಕೆ ಅವಳಿಗಿಂತಲೂ ಪ್ರವೀಣೆ. 56 ನೆಯ ವರ್ಷದಲ್ಲಿ 69 ಮಕ್ಕಳನ್ನು ಪಡೆದು ದೈವಾಧೀನಳಾದಳು. ಅವಳು ಮಕ್ಕಳನ್ನು ಪಡೆದ ಕ್ರಮ ಹೀಗೆ:—ಒಂದು ಬಾರಿಗೆ 4 ರಂತೆ 4 ಬೇಳೆ ಹೆಕ್ಕಳು (16); ಬಾರಿಗೆ ಮೂರಂತೆ 7 ಬಾರಿಗೆ 21 ಮಕ್ಕಳಾದುವು. ಅವಳ ಮಕ್ಕಳು 16 ಬಾರಿ ಎಂದರೆ 32 ಮಂದಿ. ಒಟ್ಟು 69 ಮಕ್ಕಳು.

—೦೦೦—

ಅಬಿಸೀನಿಯಾ ಚಕ್ರವರ್ತಿಯ ಸಿಂಹಾಸನ,

ಭಾರತೀಯನಿಂದ ರಚಿತವಾದದ್ದು.

ಅಬಿಸೀನಿಯಾ ಚಕ್ರವರ್ತಿಯಾದ ಹೈಲೆ ಸೆಲಾಸಿಯವರವರ ಸಿಂಹಾಸನವು ಒಬ್ಬ ಭಾರತೀಯನಿಂದ ರಚಿತವಾದದೆಂದು ಗೊತ್ತಾಗಿದೆ ಗಾಂಧಿ ಟೊಪ್ಪಿ ಧರಿಸಿದ ಮೋಹನಲಾಲ್ ಪ್ರಾಣಚಂದ್ರನೆಂಬ ಈ ಶಿಲ್ಪಿಯು ಅಹಮ್ಮದಾಬಾದು ನಿವಾಸಿಯಾಗಿರುವನು. ಇವನಿಗೆ ಸಿಂಹಾಸನವನ್ನು ತಯಾರು ಮಾಡುವುದಕ್ಕೆ ಸುಮಾರು ಹತ್ತು ತಿಂಗಳ ಕೆಲಸ ಹಿಡಿಯಿತು ಸಿಂಹಾಸನದಲ್ಲಿ ತೋರಿಸಿದ ಅದ್ಭುತ-ಕಲಾಚಾತುರ್ಯವನ್ನು ಕಂಡು ಅನೇಕ ಐರೋಪ್ಯರು ಆತನನ್ನು ಕೊಂಡಾಡಿರುವರು. ಸಿಂಹಾಸನದ ಒಟ್ಟು ಬೆಲೆ 8 000 ರೂಪಾಯಿ. ಅದಕ್ಕೆ ಉಪಯೋಗಿಸಿದ ಬೆಳ್ಳಿಯು ಹಿಂದೂಸ್ಥಾನದಿಂದಲೂ, ದಂತ ಸಾಮಗ್ರಿಗಳು ರಾಜಾಂ ಸಂಗ್ರಹದಿಂದಲೂ ಬಂದವುಗಳು. ಮೋಹನಲಾಲನಿಗೆ 1,500 ಪ್ರತಿಫಲ ದೊರತಿದೆ. ಆತನು ಚಕ್ರವರ್ತಿಗೆ ಒಂದು ಮಂಚವನ್ನೂ ತಯಾರಿಸಿಕೊಟ್ಟಿರುವನು. ಅದ್ದು ಬೇಕಾವಂತೆ ಮಲಗುವ ಕುರ್ಚಿಯೂಗಿಯೂ ಕವಾಟಾಗಿಯೂ ಮಾರ್ಪಡುವಂತೆ ರಚಿತವಾಗಿದೆ.

—೦೦೦—

ಹೊಸ ತೊಂದು ಪಕ್ಷ.

ರಾ. ಸಭೆಯನ್ನು ದೇಶದಿಂದ ಉಚ್ಚಾಟನಮಾಡುವ ಉದ್ದೇಶವುಳ್ಳ ಹೊಸತೊಂದು ಪಕ್ಷವು ಬೇಗನೆ ತಲೆದೋರುವುದಂತೆ. ನಾಸಿಕ ನಗರದಲ್ಲಿ ಅದರ ಉದ್ಭವ ಜಸ್ಟೀಸ್ ಪಂಗಡದ ಜಾತೀಯ ಪ್ರೇಮ, ಉದಾರಪಕ್ಷಗಳ ರಾಜಕೀಯ ಧ್ಯೇಯ. ಇವುಗಳನ್ನು ಆದರ್ಶವಾಗಿಟ್ಟುಕೊಂಡು ಹೊಸ ಪಂಗಡವನ್ನು ರಚಿಸುವುದಂತೆ. ದಕ್ಷಿಣ ಭಾರತದ ಜಸ್ಟೀಸರು ಉತ್ತರಕ್ಕೆ ಕಾಲಿಡಲು ಪ್ರಯತ್ನಿಸಿದಂತೆ ತೋರುತ್ತದೆ. ನಾಸಿಕ ನಗರವನ್ನು ಆರಿಸಿದುದೇಕೋ? ಅಂಬೇಡಕರು ಈ ನಗರದಲ್ಲಿ ಸದ್ಧರ್ಮತ್ಯಾಗದ ದೀಕ್ಷೆಯನ್ನು ಕೈಕೊಂಡು ದೇಶದಲ್ಲಿ ಖ್ಯಾತಿಯನ್ನು ಪಡೆದರು. ಹಾಗೆಯೇ ತಮಗೂ ಖ್ಯಾತಿಬರುವುದೆಂದು ಈ ಹೊಸ ಪಕ್ಷದವರ ಅಭಿಪ್ರಾಯವೇ?

—೦೦೦—

ಅಬಿಸೀನಿಯಾ ಬೆಕ್ಕುಗಳು.

ಅಬಿಸೀನಿಯಾ ದೇಶದ ಹೆಸರನ್ನು ಕೇಳದವರಿಗೆ ಈಗ ಅದರ ಸಂಪೂರ್ಣ ಪರಿಚಯವಾಗಿದೆ. ಯುದ್ಧವೇ ಅದಕ್ಕೆ ಕಾರಣ. ಈ ದೇಶದ ಬೆಕ್ಕುಗಳು ಬಹಳ ಚೆಲುವಾಗಿರುವಂತೆ ಅನೇಕ ಬೆಕ್ಕುಗಳನ್ನು ವೂರ್ಜಾಲಪ್ರೀಯರಾದ ಪಾಶ್ಚಿಮಾತ್ಯರು ಅಲ್ಲಿಂದ ಹಿಡಿದುಕೊಂಡು ಬರುತ್ತಿದ್ದಾರೆ.

ಲಂಡನಿನಲ್ಲಿ ಬೆಕ್ಕುಗಳ ಪ್ರದರ್ಶನವೊಂದಾಯಿತು. ಈ ಪ್ರದರ್ಶನಕ್ಕೆ ಎಲ್ಲ ದೇಶದ ಬೆಕ್ಕುಗಳೂ ಬರುತ್ತವೆ. ಅಬಿಸೀನಿಯಾ ದೇಶದ ಬೆಕ್ಕುಗಳು ಮೊತ್ತ ಈ ವರೆಗೆ ಅಲ್ಲಿಗೆ ಪ್ರವೇಶಮಾಡಿರಲಿಲ್ಲ. ಈ ಸಾರಿ ಅವುಗಳ ಪ್ರವೇಶವಾಯಿತು. ಅಬಿಸೀನಿಯ ಬೆಕ್ಕುಗಳೇ ಅಲ್ಲಿ ಬಹು ಜನರ ಮೆಚ್ಚುಗೆಯನ್ನು ಪಡೆದಿವೆ. ಎಲ್ಲರೂ ಅವನ್ನು ಕೊಳ್ಳುವವರೇ ಆಗಿದ್ದಾರೆ. ಬೆಕ್ಕುಗಳ ವಿಷಯದಲ್ಲಿ ನಿಪುಣರಾದವರು ಈ ಬೆಕ್ಕುಗಳ ಮಿಶ್ರ ಸಂತಾನಗಳು ಪರಮೋತ್ಕೃಷ್ಟವಾದವುಗಳೆಂದು ಅಭಿಪ್ರಾಯಪಡುತ್ತಿದ್ದಾರೆ.

—೦೦೦—

ಸಿರಿಯಾದಲ್ಲಿ ಕ್ರಾಂತಿ.

ಈ ಅಂತರರಾಷ್ಟ್ರೀಯ ಅಶಾಂತಿ ಚಂಡನೂರುತವು ಏಷಿಯಾ ಮೈನರ್‌ನಲ್ಲಿರುವ ಸಿರಿಯಕ್ಕೂ ಬೀಸಿ ಕ್ರಾಂತಿಯೆಬ್ಬಿಸಿದೆ. ಸಿರಿಯವು ಮಹಾ ಯುದ್ಧವಾದನಂತರ ಪರಕೀಯರ ಚಿತಾಸ್ಯದಿಂದ ಪಾರಾದರೂ ಜನಾಂಗ ಸಂಘದ ಹಿತಚಿಂತಕರ ಅಪೇಕ್ಷೆಯಂತೆ ಸರ್ವ ವಿಧದಲ್ಲೂ ಅಭಿವೃದ್ಧಿಯನ್ನು ಹೊಂದುವ ತನಕ ಫ್ರೆಂಚ್ ಸರಕಾರಕ್ಕೊಳಪಟ್ಟಿರಬೇಕಾದದ್ದೆ. ಅಂದರೆ ಪಾರತಂತ್ರ್ಯ ನಾಮ ಮಾತ್ರ ಲೋಪ.

ಪ್ರಪಂಚವೇ ಸ್ವಾತಂತ್ರ್ಯ ಸಮಭಾವಗಳ ಹೆಸರಿನಲ್ಲಿ ನೊರೆಯಿಡುತ್ತಿರುವಾಗ ಜೀವಂತವಾಗಿರುವ ಯಾವ ಜನಾಂಗವು ತಾನೇ ಸುಮ್ಮನಿದ್ದೀತು! ಸಿರಿಯವೂ ಈಗ ಕಣ್ತೆರೆದಿದೆ. ಫ್ರೆಂಚರ ಮೇಲ್ವಿಚಾರಣೆಯಲ್ಲಿ ತನ್ನ ಸರ್ವ ಹಾನಿಯೂ ಆಯಿತೆಂದು ಕೂಗಾಡಲು ಪ್ರಾರಂಭಿಸಿದೆ. ಡಮಾಸ್ಕಸ್, ಅಲೆಪ್ಪೋ ಮುಂತಾದ ಪ್ರಾಂತ್ಯಗಳಲ್ಲಿ ಭೀಕರವಾದ ದಂಗೆಗಳಾಗುತ್ತಿವೆ. ಜನರು 'ಫ್ರೆಂಚ್ ಪೋಷಣೆ ಸಾಕು. ನಮಗೆ ಸ್ವಾತಂತ್ರ್ಯ ಬೇಕು' ಎಂದು ಬೊಬ್ಬೆಯಿಡುತ್ತಿದ್ದಾರೆ. ದಂಗೆಯು ಶಮನವಾಗಿಲ್ಲ. ಅಶಾಂತಿಯು ಹೆಚ್ಚುತ್ತಿದೆ. ಮುಂದೇನೋ ಗೊತ್ತಿಲ್ಲ.

—೦೦೦—

ಬೊಂಬಾಯಿಯಲ್ಲಿ ಹಿಟ್ಲರನ ನಿಷೇಧ.

ಜರ್ಮನ್ ರಾಯಭಾರಿಯ ಕಚೇರಿಗೆ ಮುತ್ತಿಗೆ.

ಹರ್ ಹಿಟ್ಲರನು ಮೊನ್ನೆ ತನ್ನದೊಂದು ಭಾಷಣದಲ್ಲಿ ಹಿಂದೂಸ್ಥಾನದ ಮೇಲೆ ಏನಾಕಾರಣ ಟೀಕೆ ನೂಡಿ ಭಾರತೀಯರನ್ನು ಅವಮಾನಗೊಳಿಸಿದ್ದರಿಂದ ಆ ಬಗ್ಗೆ ನಿಷೇಧ ವ್ಯಕ್ತ ಮಾಡಲು ತಾ. 8 ರಲ್ಲು ಬೆಳಿಗ್ಗೆ ಕಮ್ಯುನಿಷ್ಟರು, ಸೋಸಲಿಸ್ಟರು, ಕೂಲಿಕಾರರು ಇವರೇ ಮೊದಲಾದ ನೂರಾರು ಜನರು ಕೂಡಿ ಜರ್ಮನ್ ರಾಯಭಾರಿಯ ಕಚೇರಿಗೆ ಮುತ್ತಿಗೆ ಹಾಕಿ ತಮ್ಮ ವಿರೋಧ ಪ್ರದರ್ಶಿಸಿದರು. ಈ ಜನರು ತಮ್ಮ ಕೈಯಲ್ಲಿ ಕಂಪು ನಿಶಾನಿ, ಗುದ್ದಲಿ, ಕುರುಪಿಗಳನ್ನು ಹಿಡಿದುಕೊಂಡು ಹಿಟ್ಲರನಿಗೆ ಧಿಕ್ಕಾರವಿರಲಿ ಎಂದು ಜಯ ಜಯಕಾರ ಮಾಡುತ್ತ ಬಂದಿದ್ದರು. ಪೊಲೀಸರಿಗೆ ಇದರ ಮುಂಗಡ ಸುಳಿವು ಎಳ್ಳಷ್ಟೂ ಇರಲಿಲ್ಲ, ಕೂಡಲೇ ಅವರು ಅಲ್ಲಿ ಬಂದು ವಿರೋಧ ಪ್ರದರ್ಶಕರಿಗೆ ಚದುರಿ ಹೋಗಲು ತಿಳಿಸಿದರು. ಆದರಂತೆ ಅವರು ಶಾಂತ ರೀತಿಯಿಂದ ತಿರುಗಿ ಹೋದರು. ಈಗ ಜರ್ಮನ್ ರಾಯಭಾರಿಯ ಕಚೇರಿಯ ಮುಂದೆ ಕಾವಲಿಗೆ ಪೊಲೀಸ್ ದಳವು ನಿಲ್ಲಿಸಲ್ಪಟ್ಟಿರುತ್ತದೆ. ರಾಯಭಾರಿಯು ಈ ಸಂದರ್ಭದಲ್ಲಿ ಬೊಂಬಾಯಿ ಸರ್ಕಾರಕ್ಕೆ ನಿಷೇಧ-ವ್ಯಕ್ತ ಮಾಡಿ ಪತ್ರ ಬರೆದಿರುವನೆಂದು ತಿಳಿಯುತ್ತದೆ.

—೦೦೦—

ನಾರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಮಿಟಿಯ

ಪ್ರಕಟಣೆ.

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು 1936-37 ವರ್ಷದ ಸಲುವಾಗಿ ಈಗಿನಿಂದಲೇ ಕಾಂಗ್ರೆಸ್ ಸದಸ್ಯರ ಮಾಡಲು ಅಪ್ಪಣೆ ಕೊಟ್ಟಿದ್ದಾರೆ. ಹಳ್ಳಿಗರು ಸುಗ್ಗಿ ಬೆಳೆಯದರಿಂದ ನಾಲ್ಕಾಣೆ ಕೊಟ್ಟ ಸದಸ್ಯರಾಗಲು ಈಗ ರಿಗೆ ವಿಶೇಷ ಭಾರವೆನಿಸುವದಿಲ್ಲ.

ಕಾರಣ ಕರ್ನಾಟಕದೊಳಗಿನ ಎಲ್ಲ ಕಾಂಗ್ರೆಸ್ ಕಮಿಟಿ ಈಗಿನಿಂದಲೇ ಈ ಕಾರ್ಯವನ್ನು ಕೈಕೊಳ್ಳಬೇಕು. ಈ ಕನಿಷ್ಟ 1 ಲಕ್ಷ ಸದಸ್ಯರನ್ನಾದರೂ ಮಾಡಬೇಕು. ಇಂ ದಿನಿಂದಲೇ ಒಳ್ಳೇ ಉತ್ಸಾಹದಿಂದ ಕಾರ್ಯ ಪ್ರಾರಂಭಿಸಿದ ಅದೇನೂ ಅಶಕ್ಯದ ಮಾತಲ್ಲ. ಈ ಬಗ್ಗೆ ಕೆಳಗಿನ ನಿಯ ಗಳನ್ನು ಲಕ್ಷ್ಯದಲ್ಲಿಡಬೇಕು.

(1) ಈಗ ಮಾಡಿದ ಸದಸ್ಯರು '1936-37' ವರ್ಷದ ಸದ ರು. (1936 ನೇ ಏಪ್ರಿಲ್ 1ರಿಂದ 37ನೇ ಇಸವಿ ಮಾ 31ರ ವರೆಗೆ)

(2) ಕಳೆದ ವರ್ಷದ ರಿಜಿಸ್ಟರಿಗೂ, ಈ ವರ್ಷದ ರಿಜಿಸ್ಟ ಗೂ ಗೊಂದಲ ಬಾರದಂತೆ ಹೊಸ ವರ್ಷದ ಪಟ್ಟಿಯನ್ನು ರಿಯೂಗಿಡಬೇಕು.

(3) ಮತ ಕೊಡುವಾಗ್ಯೆ ಅಥವಾ ಬೇರೆ ಕೆಲಸಗಳಲ್ಲಿ ಸದಸ್ಯರು 1936 ನೇ ಏಪ್ರಿಲ್ 1 ರಲ್ಲು ಸದಸ್ಯರಾಗುವ ದು ಎಣಿಸಬೇಕು.

ಧಾರವಾಡ, ರಾಗನಾಥ ದಿವಾಕರ್,
ತಾ. 9—2—1936. ಕಾರ್ಯದರ್ಶಿ, ಕ. ಪ್ರಾ. ಕಾ. ಕ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ತಲೆ ಹೊಡೆದು ಅಳತೆ ಮಾಡಬೇಕೆಂಬುದು ಖಾನೂನಿಗೆ ಖಂಡಿತ ವಿರೋಧವಲ್ಲ

ಆರ್ಯ್ಯ ಸಂಪಾದಕರೇ,

ನಿಮ್ಮ ತಾ. 7—2—36ರ ಪತ್ರಿಕೆಯಲ್ಲಿ ಅಳತೆ ತೂಕದ ವಿಷಯ ಒಬ್ಬರ ಬಾತ್ಮಿಯನ್ನು ನೋಡಿ ಆಶ್ಚರ್ಯ ಪಟ್ಟೆನು. ಖಾನೂನಿಗೆ ಅನುಗುಣವಾಗಿ ವರ್ತಿಸುವ ಬದಲು ವಿರೋಧ ಮಾಡಿದರೆ ಫಲಿತಾಂಶವೇನಾಗುತ್ತದೆಂಬುದು ಎಲ್ಲರಿಗೂ ಗೊ ತ್ತೇ ಇದೆ, 1931ನೇ ಇಸವಿಯ ಅಳತೆ ತೂಕಗಳ ಖಾನೂ ನು ಮೇರೆ ಜೇಪ್ ಕಮಿಷನರ್ ಸಾಹೇಬರವರ ನೋಟಿಫಿಕೇ ಶನ್ ಮೇರೆ ಪ್ರತಿಯೊಬ್ಬರೂ ತಲೆ ಹೊಡೆದೇ ಅಳತೆ ಮಾಡ ಬೇಕು. ಆ ರೂಲ್ಸ್ ಹೀಗಿದೆ:—

'ಆಕ್ಟಿನ 3 (c) ಪ್ರಕರಣದಲ್ಲಿ ಹೇಳಿರುವ ಅಳತೆಯ ಪಾ ತ್ರೆಗಳಲ್ಲಿ ಯಾವುದೊಂದರಿಂದಲಾದರೂ ಒಂದು ಪದಾರ್ಥವ ನ್ನು ಅಳಯಬೇಕಾದರೆ, ಸದರಿ ಅಳತೆಯ ಪಾತ್ರೆಗೆ ಆ ಪದಾ ರ್ಥವನ್ನು ತುಂಬಿ ಪಾತ್ರೆಯ ಮೇಲೆ ಗುಡ್ಡೆಯಂತೆ ನಿಲ್ಲಿಸ ಕೂಡದಂದೂ, ಆದರೆ ಗುಂಡಗಿರುವ ಮತ್ತು ನೆಟ್ಟಗೂ ಕೊನೆ ಯಿಂದ ಕೊನೆಗೆ ಒಂದೇ ಅಡ್ಡಳತೆಯ ವ್ಯಾಸವುಳ್ಳದ್ದಾಗಿ ಯೂ ಇರುವ ಒಂದು ಕೋಲಿನಿಂದ ಅಥವಾ ರೂಲು ದೊಂ ಣೆಯಿಂದ ಅಳತೆಯ ಪಾತ್ರೆಯನ್ನು ತಲೆ ಸವರತಕ್ಕದ್ದು, ಅಥ ವಾ ಮೂರಾಟಕ್ಕಿಟ್ಟುಕೊಂಡು ತಲೆ ಸವರಿ ಅಳೆಯಲು ಅನು ಕೂಲವಾಗಿಲ್ಲದಂಥದಾಗಿದ್ದ ಪಕ್ಷಕ್ಕೆ ಅದರ ಗಾತ್ರದಿಂದಲೂ ಆಕಾರದಿಂದಲೂ ಸಾಧ್ಯವಿರುವ ಮಟ್ಟಿಗೂ ಆ ಅಳತೆಯ ಪಾ ತ್ರೆಯೊಳಕ್ಕೆ ಎಲ್ಲಾ ಕಡೆಗಳಿಗೂ ಅದನ್ನು ಆ ಪಾತ್ರೆಯ ಅಂ ಚಿನ ವರೆಗೂ ಭರ್ತಿಯಾಗುವಂತೆ ತುಂಬಿಯೇ ಆಗಲಿ ಅಳೆಯ ತಕ್ಕದ್ದು'

ಪದಂತು ಅಳೆಯತಕ್ಕ ಪದಾರ್ಥವು ಧಾನ್ಯವಾಗಿದ್ದರೆ ಅ ದನ್ನು ಯಾವಾಗಲೂ ಗುಂಡಗಿರುವ ರೂಲು ದೊಂಣೆಯಿಂದ ಅದರ ತಲೆಯನ್ನು ಸವರಿ ಅಳೆಯತಕ್ಕದ್ದು.

(ಈ ತಿದ್ದುಪಡಯು 1934ನೇ ಇಸವಿ ನವಂಬರು 1ನೇ ತಾರೀಖಿನಿಂದ ಜಾರಿಯಲ್ಲಿರತಕ್ಕದ್ದು)

ದೇಶದ ನ್ಯಾಯಾಧಾಯಕ ಸಭೆಯು ಸಬ್ ಕಮಿಟಿಯಿಂದ ಮಸೂದೆಯನ್ನು ತಿದ್ದಿಸಿ ಅನಂತರ ಖಾನೂನು ಮಾ ಡಲಾಗಿದೆ. ಆದುದರಿಂದ ಸರ್ಕಾರದ ಮೇಲೆ ಖಂಡಿತ ದೂ ರು ಹೊರಿಸಿ ಪ್ರಯೋಜನವಿಲ್ಲ. ಉತ್ತರ ಕೊಡಗಿನಲ್ಲಿ ತಲೆ ಹೊಡೆದು ಮಾರುತ್ತಾರೆ, ಹಚ್ಚಾಗಿ ದಿನಸು ಸಾಮಾನುಗಳ ನ್ನು ಫ್ರೇಜರ್‌ಪೇಟೆಯಿಂದ ರಿಟು ಆಗಿ ತರುವದಾಗಿದೆ ಅ ಲ್ಲಿ ತಲೆ ಹೊಡೆದು ತಂದು ಇಲ್ಲಿ ತಲೆ ತುಂಬಿ ಹೀಗೆ ಕೂಡು ವುದು ಖಾನೂನು ದೇಶದ ಎಲ್ಲಾ ಕಡೆ ಹಿಂದೇ ತಂದಾಗಿರ ಬೇಕು. 265ನೇ ಪೇನಲ್ ಕೋಡಿನ ಸೆಕ್ಷನ್‌ನಲ್ಲಿ ಸ್ಥಳೀಕ ಸರ್ಕಾರದ ಖಾನೂನಿಗೆ ವಿರೋಧವಾಗಿ ಮಾಡಬೇಕೆಂದು ಹೇ ಳಿರುವದಿಲ್ಲ. ಆದುದರಿಂದ ವರ್ತಕರೇ ಮೋಸಹೋಗಬೇ ಡಿ. ಈಗಾಗಲೇ ಇನ್ಸ್‌ಪೆಕ್ಟರು 10—12 ಕೇಸು ಮಾಡಿ 3-4 ಜನರಿಗೆ ದಂಡ ವಿಧಿಸಲಾಗಿದೆ. ಅಳತೆ ತೂಕಗಳ ಇನ್ಸ್‌ಪೆಕ್ಟ ರು ಅವರ ಕೆಲಸವನ್ನು ಖಾನೂನಿಗೆ ಸರಿಯಾಗಿ ನಡಿಸಬೇಕು. ಅವರಿಗೆ ಖಾನೂನಿನಲ್ಲಿ ಸರಿಯಾದ ಅಧಿಕಾರ ಕೊಟ್ಟಿದ್ದರಿಂದ ಲೇ ಇನ್ಸ್‌ಪೆಕ್ಟರು ನಿರ್ಭಂದಿಸುವದಾಗಿದೆ. ಬರೇ ತರ್ಕಮಾ ಡಿಕೊಂಡು ಕೇಸಿನಲ್ಲಿ ಸಿಕ್ಕಿ ನರಳಬೇಡಿ.

'ಕೆ. ಬಿ'

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲುಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮುದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನಪೂರ್ತಿ ನಂಬಿರಿ.
ಪತಿ ವತ್ನಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ಏಕೀಭವಿಸಿ (ಜಾಯಿಂಟ್ ಲೈಫ್)
ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸ್ಮಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯ ಮೊಬಲಗನ್ನು ಮುಂದಳ
ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು
ಈ ಕಂಪೆನಿಯು ಎದುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ
ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—ಬಿ. ಎಸ್. ಐಯ್ಯಪ್ಪು,
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ.
26—10



ಉತ್ತಮ ಪ್ರತಿಫಲ ಯಾವದರಲ್ಲಿ?

501 ಸಾಬೂನು — ಅತ್ಯಲ್ಪ ನೀರಾಂಶದಿಂದ ಕೂಡಿದ,
ಒಳ್ಳೇ ಘಟ್ಟಿ ಸಾಬೂನು.



ಅರ್ಧಾಂಶಕ್ಕಿಂತ ಹೆಚ್ಚು ನೀರು ಬೆರೆತಿದ್ದು, ನೋಟಕ್ಕೆ
ಒಳ್ಳೇ ಸಾಬೂನಿನಂತೆ ಕಾಣುವ ಇತರ ಸಾಬೂನು.

ಅಗ್ಗವಾದ—ಸಾಬೂನುಗಳನ್ನು ಕೊಂಡುಕೊಳ್ಳುವದು ಹೆಚ್ಚು ಖರ್ಚಿಗ ಕಾರಣ. ಯಾತಕ್ಕೆಂದರೆ ಸಾಬೂನಿಗಾಗಿ ನೀವು ಹಣಕೊಟ್ಟು ಆರ್ಧ ತುಂಡು ಸಾಬೂನನ್ನು ಮಾತ್ರ ಪಡೆಯಿರಿ ಈ ಸಾಬೂನುಗಳಲ್ಲಿ 50% ರಷ್ಟು ನೀರೇ. 501 ಸಾಬೂನು ಚೆನ್ನಾಗಿ ಕೊಳೆಯನ್ನು ತೆಗೆಯುತ್ತದೆ ಮತ್ತು ಹೆಚ್ಚು ಬಾಳಿ ಕೆ ಬರುವದರಲ್ಲಿ ಅಚ್ಚರಿಯಿಲ್ಲ!

501 Soap

ವೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮವತೀ ಕಡಮೆ!

ಟಾಮ್‌ಕೋ ಮೂರಾಟದ ಮಳಿಗೆ, TOMCO ೧, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು ದಂಡು.

ತಯಾರಿಸುವವರು—ತಾತಾ ಆಯಿಲ್ ಮಿಲ್, ಕಂಪೆನಿ. ಲಿಮಿಟೆಡ್. ಬೊಂಬಾಯಿ, ಮತ್ತು ತಾತಾಪುರ.

52—38. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ
ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ
ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುವು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾರ್ಯೋತ್ಸಾಹೀ
ವಿನೀತ ಸೇವಕರ ಏರ್ಪಾಡ ಇದೆ.

ಆಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯವನ್ನು ಹೊಂದಬೇಕಾದ ಅತ್ಯಾಧುನಿಕ
ಈ ವಿಶ್ರಾಂತಿಗೃಹದಲ್ಲಿ—
ನೀವು ಅಪೇಕ್ಷಿಸಿದ—ನೀವು ವಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಅನಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—
"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—9 ಪ್ರೊಪ್ರೈಟರ್:—ವಾಮನ ರಾವ್, ಗಾಯತೊಂಡೆ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

	ರೂ
ಶೇರ್ ಬಂಡವಾಳ	— 50,000— 0—0
ವಸೂಲಾದ ಶೇರ್ ಮೊಬಲಗು	— 36,990— 0—0
ಜಮೂಬಂದ ಠೇವಣಾತಿ	— 2,58,909—6—10
ವಸೂಲಾದ ಕ್ಷೇಮನಿಧಿ	— 1,03,541— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—11—1935.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯೂಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯೂಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾಗಿರುತ್ತಿರಲಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿದ್ದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—
ಕ. ಟಿ. ಡೋಂಗರೆ ಕಂಪೆನಿ,
(52—50) ಗಿರಿಗಾಂವ್, ಬೊಂಬಾಯಿ.

ಷಿಕಾರಿಗೆ ಬೇಕಾಗುವ ನಾನಾ ವಿಧದ



ಕೋವಿ, ರೈಫಲು, ರಿವಾಲ್ವರು, ತೋಟಾಗಳು, ಬೇಟೆಯೂಡಲು ಮತ್ತು ವಿೂನು ಹಿಡಿಯಲು ಅವಶ್ಯಕವಾದ ಎಲ್ಲಾ ಸಲಕರಣಗಳ ವಿಶೇಷ ಅನುಭವವುಳ್ಳವರು.

ಕೆಟಲಾಗು ಉಚಿತ.]

[CURRENT CATALOGUE FREE.

The Bombay Armoury,
329—331, Abdul Rehman Street,
BOMBAY, 3.

26—26

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಷ್ಪಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪರದೇಶದಲ್ಲಿ ಧಾರಾಳವಾಗಿ ಖರ್ಚಾಗುವ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ದ್ರಾಕ್ಷಾಮೃತ

ಅನೇಕ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣದಿಂದ ತಯಾರಿಸಿದ ಮಧುರಾಮೃತ

ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣೊಳಗೆ ಉರಿ, ಮಲಬದ್ಧ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ನಪುಂಸಕತ್ವ ಇದ್ದಲ್ಲ ಉದು ಹೋಗಿ ವೀರ್ಯ ವೃದ್ಧಿಯೂಗುವದು. ಹೆಂಗಸರಿಗೂ. ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ರೋಗಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯೂಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು. ಸ್ಮರಣೆ:—ಬೆಳಿಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4-0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—23 ಕೂಡಗಿನ ವಿಜಂಟರು—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ
ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ
ಭಕ್ತಾ ಬ್ರದರ್ಸ್, ಕಾಸರಗೋಡು.] ಎ. ಎನ್. ಹುಚ್ಚಯ್ಯ, ವ.ರ್ಜೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯೂದಲ್ಲಿ ಸ್ಥಾಪನೆಯೂದದ್ದು) (ಹೆಡ್ ಆಫೀಸು—ಬೊಂಬಾಯಿ

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	....	ರೂ. 7,62,42,761
ವಾರ್ಷಿಕ ಉತ್ಪತ್ತಿ	....	....	ರೂ. 3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು	....		ರೂ. 54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....		ರೂ. 16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ. 15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ.

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ,	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಣ
ಕೊಯಂಬುತ್ತೂರು	ಗುಂಟೂರು	ಜಲಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, } 52—5

ಯಂ. ವಿ. ಮುತ್ತುಕೃಷ್ಣ ನಾಯುಡು
(ಬ್ರಾಂಚ್ ಸೆಕ್ರೆಟರಿ.)

Printed & published by P. J. Pelliappa at "Kodage" Press, Mercara for "Kodagu" Ltd.